ಮಹರ್ಷಿ ದೈವರಾತರು

ಪ್ರೊ ಎಸ್.ಕೆ.ರಾಮಚಂದ್ರ ರಾವ್

ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ – 388

ಮಹರ್ಷಿ ದೈವರಾತರು

ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

MAHARSHI DAIVARATHARU — a life-sketch written in Kannada by Prof. S. K. Ramachandra Rao. Published by P. N. Kamat, IBH Prakashana, 5th Main Road, Gandhinagar, Bangalore 560 009

Copyright © 1979 by the Publisher

ಬೆಲೆ ರೂ 1.50

*

ಚಿತ್ರಗಳು : ಮನೋಹರ್

*

ಮೊದಲನೆಯ ಮುದ್ರಣ : 1979. ಪ್ರಕಾಶಕರು : ಪಿ. ಎನ್. ಕಾಮತ್, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು 560 009, ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054

*

Paper used for printing this book was made available by the Government of India at concessional rate.

"ಋಷಿಗಳು ಯಾವುದೋ ಕಾಲದಲ್ಲಿ ಆಗಿಹೋದರಲ್ಲ ? ಈ ಕಾಲದಲ್ಲಿ ಅವರು ಇರುವುದುಂಟೆ ?" ಎಂದು ಸಂದೇಹಪಡುವುದು ಸಹಜವೇ. ಆದರೆ ಎಲ್ಲ ಕಾಲಗಳಲ್ಲಿಯೂ ಅವರು ತೋರಿಕೊಳ್ಳುತ್ತಾರೆ. ಅವರ ನೆರವಿಲ್ಲದೆ ಸಂಸ್ಕೃತಿ ಉಳಿಯುವುದು ಹೇಗೆ ? ಆದರೆ, ಹಾಗೆ ಕಾಲಕಾಲಕ್ಕೆ ತಲೆದೋರಿದ ಋಷಿಗಳಲ್ಲಿ ಕೆಲವರನ್ನಷ್ಟೇ ತಟ್ಟನೆ ಜನ ಗುರುತಿಸಬಲ್ಲರು. ದೇವೇಂದ್ರನಾಥ ಠಾಕೂರರು, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸರು, ನಾರಾಯಣಗುರು, ಅರವಿಂದರು,. ಅಗಡಿ ಮಹಾರಾಜರು, ರಮಣಮಹರ್ಷಿಗಳು, ಗಣೇಶಪುರಿಯ ನಿತ್ಯಾನಂದರು, ಶೃಂಗೇರಿಯ ಚಂದ್ರಶೇಖರ ಭಾರತೀ ಸ್ವಾಮಿಗಳು, ನಿಂಬಾಳದ ರಾನಡೆಯವರು, ರಾಧಾಸ್ವಾಮಿ ಪಂಥದ ಸಾವನಸಿಂಗರು ಇವರೆಲ್ಲ ಋಷಿಗಳೇ; ಇವರು ಲೋಕಪ್ರಸಿದ್ಧರೂ ಆದರು. ಮತ್ತೆ ಹಲವರು ಜನರ ಕಣ್ಣಿಗೆ ಬೀಳದೆ ಮರೆಯಾಗಿಯೇ ಇರುತ್ತಾರೆ. ಹೀಗಿದ್ದ ಮಾತ್ರಕ್ಕೆ ಅವರ ಋಷಿತನವೇನು ಊನವಾಗುವುದಿಲ್ಲ.

ಋಷಿಯೆಂದರೇನು ? ಸಂಸ್ಕೃತದ ಈ ಮಾತಿಗೆ ಮೂಲದಲ್ಲಿ ಅರ್ಥ 'ಕಾಣ್ಕೆ'ಯ ಶಕ್ತಿಯಿರುವವನು, ನೋಡುವಾತ. ಎಂದರೆ, ಸಾಮಾನ್ಯವಾಗಿ ನಾವು ನೋಡುವಂತಲ್ಲದೆ ಹೊರಗಣ್ಣಿನಿಂದ ಕಾಣಲಾಗದುದನ್ನೂ ಒಳಗಣ್ಣಿನಿಂದ ನೋಡಬಲ್ಲವನೇ ಋಷಿ. ಅವನ ನೋಟದ ಹರವು ವಸ್ತುಗಳ, ವಿಷಯಗಳ, ಸಂಗತಿಗಳ ಆಚೆ ತತ್ವಾರ್ಥವನ್ನೂ ಮುಟ್ಟುತ್ತದೆ. 'ಮಂತ್ರಗಳನ್ನು ನೋಡಬಲ್ಲವನು' ಎಂದರೆ ಇದೇ ಅರ್ಥ. ಮಂತ್ರಗಳು (ಎಂದರೆ ತತ್ವದ ನೇರವಾದ ನಿರೂಪಣೆಗಳು) ಅವನ ಕಣ್ಣೆದುರು ಬಂದು ನಿಲ್ಲುತ್ತವೆ, ಮೈದಳೆದು ಮೂಡಿಕೊಳ್ಳುತ್ತವೆ. ನಾವು ಮಂತ್ರಗಳ ಅರ್ಥವನ್ನು ಅರಿತುಕೊಳ್ಳಬೇಕೆಂದರೆ ವ್ಯಾಕರಣ, ನಿರುಕ್ತ, ವ್ಯಾಖ್ಯಾನಗಳ ನೆರವನ್ನೆಲ್ಲ ಪಡೆದುಕೊಳ್ಳಬೇಕಲ್ಲವೆ ? ಬುದ್ಧಿಶಕ್ತಿಯನ್ನು ಬಳಸಬೇಕಲ್ಲವೆ ? ಋಷಿಗಾದರೆ ಈ ಗೊಂದ

ಲದ ಅಗತ್ಯವಿಲ್ಲ; ಮಂತ್ರಗಳ ಅರ್ಥ ತಾನಾಗಿ ನೇರವಾಗಿ ಅವನಿಗೆ ಹೊಳೆಯುತ್ತದೆ.

ವೇದಮಂತ್ರಗಳೆಲ್ಲ ಹೀಗೆಯೇ ಋಷಿಗಳಿಗೆ ಹೊಳೆದವು; ಅವರ ಕಣ್ಣ ಮುಂದೆ ಮೈದಳೆದು ನಿಂತವು. ಅವರ ಈ ಕಾಣ್ಕೆಯೇ ನಮ್ಮ ದೇಶದ ಸಂಸ್ಕೃತಿಯನ್ನು ಎತ್ತಿ ನಿಲ್ಲಿಸಿತು, ಪ್ರಪಂಚದಲ್ಲೆಲ್ಲ ನಮ್ಮ ದರ್ಶನಕ್ಕೆ ಎದುರಿಲ್ಲ, ಸರಿಯಿಲ್ಲ ಎನ್ನುವಂತೆ ಮಾಡಿತು. ನಮ್ಮ ಕಾಲದಲ್ಲಿಯೂ ಹೀಗೆ ಮಂತ್ರಗಳನ್ನು ಕಂಡುಕೊಂಡ ಋಷಿಯೊಬ್ಬರಿದ್ದರು. ಅವರೇ ದೈವರಾತರು. ಅವರನ್ನು ಸುತ್ತಲ ಜನ ಮಹರ್ಷಿಯೆಂದು ಕರೆದು ಗೌರವಿಸಿದರು. ಅವರೂ ಋಷಿಯಂತೆಯೇ ತಮ್ಮ ಬಾಳನ್ನು ಕಳೆದರು. ಆದರೆ ಸಣ್ಣದೊಂದು ವಲಯದಾಚೆ ಅವರ ಪ್ರಖ್ಯಾತಿ ಬೆಳೆಯಲಿಲ್ಲ. ಬಹು ಜನಕ್ಕೆ ಅವರ ಹಿರಿಮೆ ಅಪರಿಚಿತವಾಗಿಯೆ ಉಳಿಯಿತು. ಅವರು ಕನ್ನಡನಾಡಿನವರೆ ಆದರೂ ಕನ್ನಡ ಜನತೆ ಬಹುಮಟ್ಟಿಗೆ ಅವರನ್ನು ಅರಿಯರು. ಅವರನ್ನು ಅರಿಯದಿದ್ದರೆ ಅವರಿಗೇನು ನಷ್ಟವಿರದು; ಆದರೆ ಅದರ ಲಾಭವನ್ನು ಪಡೆದುಕೊಳ್ಳಲಾರದೆ ಹೋದ ಜನ ದುರ್ದೈವಿಗಳಷ್ಟೆ.

ಗೋಕರ್ಣದ ಹಿನ್ನೆಲೆ

ಮಹರ್ಷಿ ದೈವರಾತರು ಗೋಕರ್ಣದವರು. ಸಮುದ್ರತೀರದ ಗೋಕರ್ಣ ಉತ್ತರ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಕ್ಷೇತ್ರ. ಕುಮಟ ತಾಲ್ಲೂಕಿಗೆ ಸೇರಿದಂತಿರುವ ಈ ಸ್ಥಳದಲ್ಲಿ ಮೂವತ್ತು ತೀರ್ಥಗಳು ಅಡಗಿವೆ; ಮುಖ್ಯ ದೇವತೆ ಮಹಾಬಲೇಶ್ವರ ದೇವರಾದರೂ ಬೇರೆ ಮೂವತ್ತು ಲಿಂಗಗಳೂ, ನರಸಿಂಹ ದೇವರೂ, ಶಂಕರನಾರಾಯಣ ದೇವರೂ, ಗಣಪತಿಯೂ ಇಲ್ಲಿ ಪೂಜೆಗೊಳ್ಳುತ್ತಾರೆ. ತ್ರೇತಾಯುಗದಲ್ಲಿ ಲಂಕೆಯೊಡೆಯ ರಾವಣನು ಪರಮೇಶ್ವರನನ್ನು ತಪಸ್ಸಿನಿಂದ ಒಲಿಸಿ, ಅವನ ಆತ್ಮಲಿಂಗವನ್ನೇ ವರವಾಗಿ ಪಡೆದು, ಲಂಕೆಗೆ ಹಿಂದಿರುಗುವ ದಾರಿಯ ಗೋಕರ್ಣದಲ್ಲಿ ಇದರ ಪ್ರತಿಷ್ಠೆಯಾಯಿತೆಂದು ಕಥೆಯಿದೆ. ಲಂಕೆಯನ್ನು ಮುಟ್ಟುವವರೆಗೆ ಲಿಂಗವನ್ನು ಕೆಳಗಿರಿಸಬಾರದೆಂದು ಸಮಯವಿದ್ದಿತಂತೆ. ಆದರೆ ಗೋಕರ್ಣದ ಬಳಿ ಬಂದಾಗ ರಾವಣನಿಗೆ ಸಂಧ್ಯಾವಂದನೆಯ ಕಾಲ ಒದಗಿತು. ಬ್ರಹ್ಮಚಾರಿಯಂತೆ ಮೈಮರೆಸಿಕೊಂಡು ಕುಳಿತಿದ್ದ ಗಣಪತಿಯ ಕೈಲಿರಿಸಿ ತಾನು ಹೊರಟ. ಆದರೆ ಮಾಯಾವಟು "ನಾನು ಇಲ್ಲಿಯೇ ಇದನ್ನು ಹಿಡಿದು ಬಹುಕಾಲ ನಿಂತಿರಲಾರೆ. ನಾನು ಹೋಗಬೇಕಾದಾಗ ಮೂರು ಬಾರಿ ಕರೆಯುತ್ತೇನೆ. ಅಷ್ಟರಲ್ಲಿ ನೀನು ಬರದಿದ್ದರೆ ಕೆಳಗಿರಿಸಿ ಹೊರಟು ಹೋಗುತ್ತೇನೆ" ಎಂದು ಮಾತು ಮಾಡಿಕೊಂಡ. ಆಗಲೆಂದು ರಾವಣ ದೂರ ಸರಿದೊಡನೆ, ಬೇಗ ಬೇಗನೆ ಮೂರು ಕೂಗು ಹಾಕಿ, ಲಿಂಗವನ್ನು ನೆಲದ ಮೇಲಿರಿಸಿ ಮರೆಯಾಗಿಬಿಟ್ಟ! ರಾವಣ ಹಿಂದಿರುಗಿ ಬಂದು ನೋಡಿದಾಗ ಆತ್ಮಲಿಂಗ ಭೂಮಿಯಲ್ಲಿ ಬೆಸೆದುಕೊಂಡು ಕೂತಿತ್ತು; ತನ್ನ ಬಲವನ್ನೆಲ್ಲ ಬಳಸಿ ಕಿತ್ತರೂ ಮೇಲೇಳಲಿಲ್ಲ, ಈ 'ಮಹಾಬಲ' ಲಿಂಗ! ಇವನ ಸಾಹಸದ ಫಲವೇನೆಂದರೆ ಲಿಂಗದ ಆಕಾರ ತಿರುಚಿಕೊಂಡು ಹಸುವಿನ ಕಿವಿಯಂತೆ ಆಗಿಬಿಟ್ಟಿತು (ಗೋಕರ್ಣವೆಂದರೆ ಹಸುವಿನ ಕಿವಿ); ಲಿಂಗವೇನೂ ಮೇಲೆ ಬರಲಿಲ್ಲ. ಹೀಗಾಗಿ ಮಹಾಬಲೇಶ್ವರ ಗೋಕರ್ಣದಲ್ಲಿಯೇ ಉಳಿದ.

ಬ್ರಹ್ಮಚಾರಿ ವೇಷದ ಗಣಪತಿ ರಾವಣನನ್ನು ವಂಚಿಸಿ
ಆತ್ಮಲಿಂಗವನ್ನು ಗೋಕರ್ಣದಲ್ಲಿರಿಸಿದ

ಗೋಕರ್ಣದಲ್ಲಿ ಹಿಂದಿನಿಂದಲೂ ವೈದಿಕ ವಿದ್ಯೆಯನ್ನು ನಿಷ್ಠುರವಾಗಿ, ನಿಷ್ಠೆಯಿಂದ ಉಳಿಸಿಕೊಂಡು ಬಂದಿರುವ ಮನೆತನಗಳಿವೆ. ಹೀಗೆ ಭಾರತದ ಬೇರೆಲ್ಲಿಯೂ ಇರದು ಎಂದರೆ ಹೆಚ್ಚಲ್ಲ. ಬಾಳುವೆ ಸರಳವಾಗಿ, ಪಾಂಡಿತ್ಯ ಪೂರ್ಣವಾಗಿ, ಲಕ್ಷ್ಯ ಉದಾತ್ತವಾಗಿರುವ ಈ ವೈದಿಕ ಕುಟುಂಬಗಳು ಅತಿ ಪ್ರಾಚೀನ ಸಂಸ್ಕೃತಿಯ ಪರಂಪರೆಯನ್ನು ಅಡೆ–ತಡೆಯಿಲ್ಲದೆ, ಓರೆ–ಕೋರೆ ಗಳಿಲ್ಲದೆ ಉಳಿಸಿಕೊಂಡು ಬಂದಿವೆ. ವೇದವನ್ನು ಸಾಂಗವಾಗಿ, ಕ್ರಮವರಿತು ಕಲಿಯುವುದೂ ಕಲಿಸುವುದೂ ಈ ಕ್ಷೇತ್ರದ ಹೆಚ್ಚುಗಾರಿಕೆ. ಹೊಟ್ಟೆಹೊರೆದು ಕೊಳ್ಳಲು ಬೇಸಾಯವೇ ಮೊದಲಾದ ಇತರ ವೃತ್ತಿಗಳನ್ನು ಹಿಡಿದರೂ ಮನೆ ತನದಿಂದ ಬಂದ ವೇದವಿದ್ಯಾಭ್ಯಾಸವನ್ನು ಮಾತ್ರ ಕೈಬಿಡುವುದಿಲ್ಲ.

ಇಂಥ ಒಂದು ವೈದಿಕ ಕುಟುಂಬದಲ್ಲಿ ದೈವರಾತರು ಹುಟ್ಟಿದರು. ಅವರ ತಂದೆಯ ಹೆಸರು ವಿಘ್ನೇಶ್ವರ ವರದೇಶ್ವರ ಭಟ್ಟರೆಂದು; ಮನೆತನದ ಹೆಸರು 'ಭಡತಿ'. 'ದೈವರಾತ'ರೆನ್ನುವುದು ಅವರ ಮೊದಲಿನ ಹೆಸರಲ್ಲ. ತಂದೆ ತಾಯಿಯರು ಇಟ್ಟ ಹೆಸರು ಗಣೇಶನೆಂದು. ನೆರೆಯುವರಿಗೆ ಅವರು ಗಣೇಶ ಭಟ್ಟ ಭಡತಿ. ತಂದೆ ಕೈಗೊಂಡಿದ್ದ ಹವ್ಯಾಸ ಬೇಸಾಯ. ಆದರೆ ಅವರು ಪಂಡಿ ತರು. ವೇದವನ್ನು ಸಂಪ್ರದಾಯದಂತೆ ಕಲಿತಿದ್ದವರು. ಸುಮಾರು ಅನುಕೂಲ ಸ್ಥರು; ವೇದವನ್ನು ಓದುವುದು, ನಿತ್ಯನೈಮಿತ್ತಿಕ ಕರ್ಮಗಳನ್ನು ಚಾಚು ತಪ್ಪದೆ ನಡೆಸುವುದು, ಸ್ವಾಧ್ಯಾಯ ಮಾಡುವುದು ಇಷ್ಟರಲ್ಲಿ ತಮ್ಮ ಬಿಡುವಿನ ವೇಳೆಯನ್ನೆಲ್ಲ ಕಳೆಯುತ್ತಿದ್ದರು. ಸದಾಚಾರಶೀಲರು; ಪ್ರಾಪಂಚಿಕವಾದ ವ್ಯವಹಾರದಿಂದ ದೂರ ಇದ್ದವರು. ತಾಯಿಯ ಹೆಸರು ನಾಗವೇಣಿ. ಆಕೆಯೂ ಸದಾಚಾರಶೀಲೆ, ಅತಿಥಿಗಳನ್ನಾದರಿಸುವುದರಲ್ಲಿ, ಮನೆಗೆಲಸದಲ್ಲಿ, ಗಂಡನ ಅಗ್ನಿಹೋತ್ರವೇ ಮೊದಲಾದ ನಿತ್ಯಕರ್ಮಗಳಲ್ಲಿ ಪಾಲುಗೊಳ್ಳುವುದ ರಲ್ಲಿ ಎತ್ತಿದ ಕೈ. ಇಂಥವರ ಮಗನಾಗಿ ಹುಟ್ಟಿದ ಗಣೇಶನಿಗೆ ಸಂಪ್ರದಾಯ ದಲ್ಲಿ ಶ್ರದ್ಧೆ ಬೆಳೆದುದಾಗಲೀ, ಸದಾಚಾರದಲ್ಲಿ ನಿಷ್ಠೆ ಮೂಡಿದುದಾಗಲೀ ಏನು ಆಶ್ಚರ್ಯ ?

ಮಗನಿಗೆ ವೇದವನ್ನು ಕಲಿಸತೊಡಗಿದವರು ತಂದೆಯೆ. ಅವರಿಂದ ವೇದಾಧ್ಯಯನ ಅಷ್ಟಿಷ್ಟು ಸಾಗಿದಮೇಲೆ, ವಾಡಿಕೆಯಂತೆ ಮನೆತನದ ಗುರು ಗಳಲ್ಲಿ ಕಲಿಯಬೇಕೆಂದು ಕೃಷ್ಣದೀಕ್ಷಿತ ಮಯ್ಯರೆಂಬುವರ ಬಳಿ ಗಣೇಶ ಭಟ್ಟರು ಅಧ್ಯಯನಕ್ಕೆ ನಿಂತರು. ಗಣೇಶಭಟ್ಟರು ಹುಟ್ಟಿದ ದಿನ, ಶಕವರ್ಷ

1813 ಪುಷ್ಯ ಶುಕ್ಲ ಪಂಚಮಿ ಸೋಮವಾರ (ಕ್ರಿ. ಶ. 1891ರ ಜನವರಿ 4ರಂದು). ತಾವು ಹದಿನೈದು ವರ್ಷ ಮುಟ್ಟುವುದರೊಳಗೆ ದೀಕ್ಷಿತರಿಂದ ಋಗ್ವೇದವನ್ನೂ ಯಜುರ್ವೇದವನ್ನೂ ಸಕ್ರಮವಾಗಿ ಕಲಿತುಬಿಟ್ಟಿದ್ದರು ! ಇಷ್ಟಾದರೂ ಓದು ಬರಹವೆಂದರೆ ಅವರ ಆಸಕ್ತಿ ಅಷ್ಟಷ್ಟೇ. ಅವರು ಬುದ್ಧಿವಂತರೆಂದು ತಂದೆತಾಯಿಯರಾಗಲಿ ನೆರೆಹೊರೆಯವರಾಗಲಿ ಬಗೆದೇ ಇರಲಿಲ್ಲ. ಸ್ವಲ್ಪ ಪೆದ್ದು ಎಂದೇ ಅವರ ಎಳೆತನದ ಪ್ರಖ್ಯಾತಿ! ತಂದೆತಾಯಿಯರೂ ಇವರನ್ನು 'ಬಲಗೊಂಬೆ' ಎಂದೇ ಮೂದಲಿಸಿ ಕರೆಯುತ್ತಿದ್ದುದುಂಟು.

ವೇದವನ್ನು ಪದ್ಧತಿಯಂತೆ ಕಲಿತಾಯಿತು; ಅದಕ್ಕೆ ಪರಿಕರಗಳಾದ ಇತರ ವಿದ್ಯೆಯ ಭಾಗಗಳನ್ನು ಕಲಿಯಬೇಕೆಂಬ ಕಾತರವೇನು ಇವರಲ್ಲಿ ಕಾಣಲಿಲ್ಲ. ಮನೆತನದಲ್ಲಿ ಬಂದ ಪಾಂಡಿತ್ಯ ಇವರಲ್ಲಿ ಮುಂದುವರೆಯುವುದೆಂದು ಯಾರೂ ಬಗೆಯಲಿಲ್ಲ. ಈ ಕಲ್ಲು ಯಾವ ವಿಗ್ರಹವಾಗುವುದೋ, ಇಲ್ಲವೆ ಬರಿ ಕಲ್ಲಾಗಿಯೇ ಉಳಿಯುವುದೊ ಎಂಬ ಶಂಕೆ ಮನೆಯಲ್ಲಿ ಹಿರಿಯರನ್ನು ಕಾಡತೊಡಗಿತು. ಆದರೆ ಈ ಸಂದಿಗ್ಧ ಪರಿಸ್ಥಿತಿಯನ್ನು ಬಹುಕಾಲ ಉಳಿಯಗೊಡದೆ ಅವರ ಬಾಳುವೆಯ ಕೋಡಿಯೊಂದನ್ನು ಹೊರಗೆಳೆಯುವ ಸಂದರ್ಭ ಒದಗಿಬಂದಿತು.

ಉಜ್ಜಯಿನಿಯಿಂದ ರಾಮದಾಸಮಹಾರಾಜರೆಂಬ ಬ್ರಹ್ಮಚಾರಿ ಸಂತರು ಕ್ಷೇತ್ರಾಟನೆ ಮಾಡುತ್ತ ಹೊರಟವರು ಗೋಕರ್ಣಕ್ಕೆ ಬಂದರು. ನಾಡಿನ ದೊಡ್ಡ ಕ್ಷೇತ್ರಗಳಲ್ಲಿ ಗೋಕರ್ಣ ಒಂದಲ್ಲವೆ ? ಈ ಸಂತರು ದೇವರ ನಾಮ ಸಂಕೀರ್ತನೆ ಮಾಡುತ್ತ, ಭಜನೆಗಳನ್ನು ಹಾಡುತ್ತ, ಗೆಜ್ಜೆಕಾಲಿನಿಂದ ಕುಣಿಯುತ್ತಿದ್ದರು. ಈ ಪದ್ಧತಿ ಗಣೇಶಭಟ್ಟರ ಗಮನವನ್ನು ಸೆಳೆಯಿತು. ದೇವರ ಬಗ್ಗೆ ಇಷ್ಟೊಂದು ಭಾವುಕತನ ಇರುವುದು ಇವರನ್ನು ಆಕರ್ಷಿಸಿತು. ರಾಮ ರಾಮದಾಸಮಹಾರಾಜರನ್ನು ಕಂಡು ಅವರಿಂದ ಸಂಕೀರ್ತನ ಪದ್ಧತಿಯನ್ನು ಕಲಿತುಕೊಂಡರು; ಅವರ ಭಜನೆಗಳನ್ನೆಲ್ಲ ಕಲಿತು ತಮ್ಮದಾಗಿ ಮಾಡಿಕೊಂಡರು; ಗೆಜ್ಜೆ ಕಾಲಿನಿಂದ ಕುಣಿಯುವ ಬಗೆಯನ್ನೂ ಅಭ್ಯಾಸ ಮಾಡಿದರು. ಗುರು–ಶಿಷ್ಯರ ಸಂಬಂಧ ಎಷ್ಟು ನಿಕಟವಾಗಿ ಬೆಳೆಯಿತೆಂದರೆ ರಾಮದಾಸರು ಗೋಕರ್ಣದಿಂದ ಹೊರಟಾಗ ಗಣೇಶಭಟ್ಟರೂ ಅವರ ಬೆನ್ನಿಗೆ ಬಿದ್ದರು !

ರಾಮದಾಸರು ದಕ್ಷಿಣದ ಯಾತ್ರೆಯನ್ನೆಲ್ಲ ಮುಗಿಸಿ ಗೋಕರ್ಣಕ್ಕೆ ಬಂದಿದ್ದರು; ಅಲ್ಲಿಂದ ಮತ್ತೆ ಉತ್ತರ ದೇಶದ ಕಡೆ ಹೊರಟರು. ಭಟ್ಟರೂ

ಅವರ ಪರಿವಾರದಲ್ಲಿ ಸೇರಿಕೊಂಡು ಗೋಕರ್ಣದಿಂದ ಹೊರಬಿದ್ದರು. ರಾಮದಾಸಮಹಾರಾಜರೊಂದಿಗೆ ಉತ್ತರ ಭಾರತದ ಹಲವಾರು ಪುಣ್ಯಸ್ಥಳಗಳನ್ನು ನೋಡಿಕೊಂಡು ನೇಪಾಳಕ್ಕೆ ಹೋಗಿ ಪಶುಪತಿನಾಥನ ಮುಂದೆ ಹಾಡಿ, ಕುಣಿದು ತಮ್ಮ ಊರಿಗೆ ಮರಳುವಾಗ ಎರಡು ವರ್ಷಗಳು ಕಳೆದಿದ್ದವು ! ಸಂತರ ಸಂಪರ್ಕದಲ್ಲಿ ಭಟ್ಟರ ಆಧ್ಯಾತ್ಮಿಕ ಪಿಪಾಸೆ ಬೆಳೆಯಿತು. ಆದರೆ ಸಂಕೀರ್ತನ–ಭಜನೆಗಳಷ್ಟರಲ್ಲಿಯೇ ಅದು ತೃಪ್ತಿಗೊಳ್ಳುವಹಾಗೆ ಕಾಣಲಿಲ್ಲ. ಭಕ್ತಿಯ ಬೀಜವೇನೋ ಬೇರೂರಿಕೊಂಡಿತು.

ಋಷಿಜೀವನಕ್ಕೆ ಸಿದ್ಧತೆ

ಹೀಗೆ ರಾಮದಾಸಮಹಾರಾಜರ ಸಂಗಡ ಉತ್ತರ ಭಾರತದಲ್ಲೆಲ್ಲ ಅಡ್ಡಾಡಿ ಗೋಕರ್ಣಕ್ಕೆ ಹಿಂದಿರುಗಿದ ನಂತರ ಭಟ್ಟರ ಚೇತನಕ್ಕೆ ಮತ್ತೆ ನೀರೆರೆದವರು ವಾಸುದೇವಾನಂದ ಸರಸ್ವತಿಗಳು. ಇವರು ಮಹಾರಾಷ್ಟ್ರ ಪ್ರಾಂತ್ಯದ ಸಂತರು; ಆ ಕಡೆ ಇವರನ್ನು ಟೇಂಬೆ ಮಹಾರಾಜರೆಂದು ಕರೆಯುತ್ತಿದ್ದರು. ಇವರು ಭಕ್ತಿಮಾರ್ಗವನ್ನೂ ಯೋಗಮಾರ್ಗವನ್ನೂ ಬೆರೆಸಿ ಉಪದೇಶ ಮಾಡುತ್ತಿದ್ದರು. ಯೋಗಶಾಸ್ತ್ರದಲ್ಲಿ ಆಸನ ಮತ್ತು ಪ್ರಾಣಾಯಾಮಗಳನ್ನೇ ಹೆಚ್ಚಾಗಿ ಹೇಳಿಕೊಡುತ್ತಿದ್ದರು ; ಇದಕ್ಕೆ ಹಠಯೋಗವೆಂದು ಹೆಸರು. ಇವರು ತೀರ್ಥಯಾತ್ರೆಯ ಸಂದರ್ಭದಿಂದ ಗೋಕರ್ಣಕ್ಕೆ ಬಂದಾಗ ಭಟ್ಟರಿಗೆ ಇವರ ಸಂಪರ್ಕ ಒದಗಿತು. ಸಂತರ ಬಳಿ ಭಟ್ಟರು ಹಠಯೋಗದ ಮರ್ಮಗಳನ್ನೆಲ್ಲ ಅರಿತುಕೊಂಡು ಅಭ್ಯಾಸ ಮಾಡತೊಡಗಿದರು. ರಾಮದಾಸಮಹಾರಾಜರಿಂದ ಒದಗಿದ ತಿರುವು ಟೇಂಬೆ ಮಹಾರಾಜರಿಂದ ನಿಶ್ಚಿತವಾದ ಒಂದು ದಾರಿಯನ್ನು ಹಿಡಿಯುವಂತಾಯಿತು. ಈ ಆಧ್ಯಾತ್ಮಿಕ ಪ್ರವೃತ್ತಿ ಅವರಲ್ಲಿ ದೃಢವಾಗಿ, ಲೌಕಿಕವಾದ ಹವ್ಯಾಸಗಳು ಸಡಿಲವಾಗತೊಡಗಿದುವು.

ರಾಮದಾಸರಿಂದ ಕಲಿತ ಭಜನೆಯ ಮಾರ್ಗ ಅವರಿಗೆ ತುಂಬ ಹಿಡಿಸಿದ್ದಿತು. ಕಾಲಿಗೆ ಗೆಜ್ಜೆಕಟ್ಟಿಕೊಂಡು ಊರ ಗುಡಿಯಲ್ಲಿ ದೇವರ ಎದುರು ತಮ್ಮ ಕಂಚಿನ ಕಂಠದಿಂದ ಹಾಡಿಕೊಂಡು ಕುಣಿಯಲು ಮೊದಲಿಟ್ಟರೆ, ಅವರಿಗೆ ಇಹದ ಅರಿವೇ ಜಾರುತ್ತಿದ್ದಿತು ; ಮೈಮರೆತು ಕುಣಿಯುತ್ತಿದ್ದರೆ ಗಂಟೆಗಳು ಕಳೆದರೂ ತಿಳಿಯುತ್ತಿರಲಿಲ್ಲ. ಒಮ್ಮೆ ಸಂಜೆ ಹೀಗೆ ಗುಡಿಯಲ್ಲಿ ಭಜನೆ–ನರ್ತನ ಸೇವೆಯಲ್ಲಿ ತೊಡಗಿದ್ದಾಗ ವೇಳೆ ಕಳೆದು ಗುಡಿಯ ಬಾಗಿಲು ಮುಚ್ಚುವುದೂ ಅವರ ಗಮನಕ್ಕೆ ಬರಲಿಲ್ಲ. ಗುಡಿಯಿಂದ ಅವರನ್ನು ಬಲವಂತವಾಗಿ ಹೊರಹಾಕಬೇಕಾಯಿತು. ಹೊರಗೆ ಬಂದರೂ ಅವರ ಭಕ್ತಿಯ, ಭಾವುಕತನದ ಗುಂಗು ಹರಿಯಲಿಲ್ಲ ; ಹಾಡಾಗಲಿ ಕುಣಿತವಾಗಲಿ ನಿಲ್ಲಲಿಲ್ಲ. ನೇರವಾಗಿ ಕಡಲತೀರದ ಮರಳು ಹಾಸಿಗೆಯ ಮೇಲೆ ಬಂದು ಅಲ್ಲಿ

ಟೇಂಬೆ ಮಹಾರಾಜರ ಸಂಪರ್ಕದಿಂದ ಅವರ ಚೇತನ ಸಂಸ್ಕಾರ ಹೊಂದಿತು

ಕಡಲೆದುರು, ಆಗಸದಡಿ ತಮ್ಮ ಕೀರ್ತನ–ನರ್ತನ ಸೇವೆ ಮುಂದುವರಿಸಿದರು. ರಾತ್ರಿಯೆಲ್ಲ ಹೀಗೆಯೇ ಕಳೆಯಿತು. ಬೆಳಕು ಹರಿದಮೇಲೆಯೇ ಅವರ ಎಚ್ಚರ ಮರಳಿದುದು !

ರಾಮದಾಸರೊಂದಿಗೆ ಉತ್ತರ ಭಾರತದ ಯಾತ್ರೆ ಮಾಡುತ್ತಿದ್ದಾಗಲೆ ಭಟ್ಟರಿಗೆ ಯೋಗಾಭ್ಯಾಸದ ಗೀಳು ಹತ್ತಿತ್ತು. ಗೋಕರ್ಣಕ್ಕೆ ಹಿಂದಿರುಗಿದ ಮೇಲೆ ಟೇಂಬೆ ಮಹಾರಾಜರ ಸಂಪರ್ಕ ಒದಗಿದುದು ಬಯಕೆ ಕೈಗೂಡಿದಂತೆಯೇ ಆಯಿತು. ಯೋಗಾಸನಗಳು, ಪ್ರಾಣಾಯಾಮ ಮತ್ತು ಹಠ ಯೋಗದ ಇತರ ಪ್ರಕ್ರಿಯೆಗಳನ್ನು ಚೆನ್ನಾಗಿ ಜೀರ್ಣಿಸಿಕೊಂಡು ಮುಂದಿನ ಹಾದಿಗೆ ಅಣಿಮಾಡಿಕೊಂಡರು. ಮೊದಲು ಭಜನೆಯಿಂದ ಭಾವಶುದ್ಧಿ, ಅನಂತರ ಹಠಯೋಗದಿಂದ ದೇಹಶೋಧ. ಹೀಗೆ ಚೇತನದ ಸಂಸ್ಕಾರವಾದ ಮೇಲೆ ಮುನಿಗಳ ಪ್ರಭಾವವೊಂದು ಅವರಿಗೆ ತಾನಾಗಿ ಮೂಡಿಬಂದಿತು.

'ಕಾವ್ಯಕಂಠ'ರೆಂದು ಹೆಸರು ಪಡೆದಿದ್ದ ವಾಸಿಷ್ಠ ಗಣಪತಿ ಮುನಿಗಳು ಗೋಕರ್ಣಕ್ಕೆ ಬಂದು ಅಲ್ಲಿನ ಉಮಾಮಹೇಶ್ವರ ಗುಡ್ಡದ ಮೇಲೆ ಗುಡಿಸಲನ್ನು ಕಟ್ಟಿಕೊಂಡು ತಪಸ್ಸಿಗೆಂದು ಕೊಂಚಕಾಲ ತಂಗಿದರು. ಅವರೊಂದಿಗೆ ಅವರ ಹೆಂಡತಿಯೂ ಬಂದಿದ್ದರು. ಇಬ್ಬರೂ ಋಷಿ ದಂಪತಿಗಳಂತೆ ಮೌನ, ವ್ರತ, ಧ್ಯಾನ, ಪೂಜೆಗಳಲ್ಲಿಯೆ ತೊಡಗಿರುತ್ತಿದ್ದರು. ಅವರ ಪರಿಚರ್ಯೆಗೆಂದು ಭಟ್ಟರು ಅವರ ಬಳಿ ನಿಂತರು. ಈ ತಪೋವನದ ವಾತಾವರಣ ಭಟ್ಟರ ಸಂಸ್ಕಾರವನ್ನು ಇನ್ನಷ್ಟು ಅಂತರ್ಮುಖವಾಗಿಸಿತು. ಭಟ್ಟರು ಮುನಿಗಳ ಬಳಿ ಬಂದುದು ಅವರಿಗೆ ಅಡುಗೆ ಮಾಡಿಡುವ ನೆಪದಿಂದ. ದಿಟವಾಗಿ ಅವರನ್ನು ಸೆಳೆದುದು ತಪಶ್ಚರ್ಯೆಯ ಒಲುವು. ಮುನಿಗಳ ಒಡನಾಟ, ಮಾರ್ಗದರ್ಶನ, ಸಾತ್ವಿಕ ಸನ್ನಿಧಾನ ಇವುಗಳ ಸವಿಯನ್ನು ಮನಸಾರೆ ಹೀರುವುದೇ ಭಟ್ಟರ ಬಯಕೆಯಾಗಿದ್ದಿತು. ಹೀಗೆ ಗುರುವಿನ 'ಗುಲಾಮ'ನಾಗಿ ತಮ್ಮ ಸಾಧನೆಯ ದಾರಿಯನ್ನು ಗಟ್ಟಿಮಾಡಿಕೊಂಡರು.

ಮುನಿಗಳನ್ನು ಕಾಣುವ ಮೊದಲು ಭಟ್ಟರು ದೇಶದಲ್ಲೆಲ್ಲ ಅಡ್ಡಾಡಿ ಎಷ್ಟೋ ಮಂದಿ ಸಂತರನ್ನೂ ಮುನಿಗಳನ್ನೂ ಮಹಾಮಹಿಮರನ್ನೂ ಕಂಡಿದ್ದರು. ರಾಮದಾಸರು ಮತ್ತು ವಾಸುದೇವಾನಂದರು ಅವರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ್ದರೂ ಭಟ್ಟರು ಅವರನ್ನು ತಮ್ಮ ಗುರುಗಳೆಂದು ಪರಿಗಣಿಸಲು ಸಿದ್ಧರಿರಲಿಲ್ಲ. ಬೇರೆ ಯಾರೂ ಅವರಿಗೆ ನೀಡದಿದ್ದ ಆಶ್ವಾಸನೆ ವಾಸಿಷ್ಠ ಗಣಪತಿ ಮುನಿಗಳಿಂದ ದೊರೆಯಿತು. ಅವರನ್ನೇ ತಮ್ಮ

ಗುರುಗಳೆಂದು ಬಗೆದು ಅವರ ಪ್ರಭಾವವನ್ನು ರೂಢಿಸಿಕೊಳ್ಳಲೆತ್ನಿಸಿದರು. ಸಿದ್ಧತೆಯಿಂದ ಸಾಧನೆ, ಸಾಧನೆಯಿಂದ ಸಿದ್ಧಿ ಎನ್ನುವುದು ಅವರಿಗೀಗ ಮನ ದಟ್ಟಾಯಿತು.

ಗಣಪತಿ ಮುನಿಗಳು

ವಾಸಿಷ್ಠ ಗಣಪತಿ ಮುನಿಗಳ ವಿಚಾರ ಹೇಳದೆ ದೈವರಾತರ ವಿಚಾರ ಹೇಳುವುದು ಸಾಧ್ಯವಿಲ್ಲ. ಗಣಪತಿ ಮುನಿಗಳು (ಮೊದಲ ಹೆಸರು ಗಣಪತಿ ಶಾಸ್ತ್ರಿಗಳು) ಋಗ್ವೇದಿ; ಕೌಂಡಿನ್ಯ ಗೋತ್ರದ ಅಯ್ಯಲ ಸೋಮಯಾಜಿ ಎಂಬ ಮನೆತನಕ್ಕೆ ಸೇರಿದವರು ; ಅವರ ಹಿರಿಯರು ಕುಂಭಕೋಣದ ಹೊರಗೆ ವಲಂಗಿಮಾನ್ ಅಗ್ರಹಾರದವರು. ಇವರು ಹುಟ್ಟಿದ್ದು ಆಂಧ್ರ ಪ್ರದೇಶದ ವಿಶಾಖಪಟ್ಟಣದ ಬಳಿ ; ಮೊದಲಿಗೆ ಬೊಬ್ಬಿಳಿ ರಾಜ್ಯಕ್ಕೆ ಸೇರಿದ್ದ ಕಲವರಾಯಿ ಎಂಬ ಹಳ್ಳಿಯಲ್ಲಿ. ಇವರ ತಂದೆ ಕಾಶಿಗೆ ಯಾತ್ರೆ ಹೋಗಿದ್ದಾಗ ಅಲ್ಲಿ ಧುಂಡೀಗಣಪತಿಯ ಅನುಗ್ರಹವಾಯಿತೆಂಬ ನಂಬಿಕೆಯಿಂದ, ಹಿಂದಿರುಗಿ ಬಂದಮೇಲೆ ಹುಟ್ಟಿದ ಈ ಮಗುವಿಗೆ ಗಣಪತಿಯೆಂದೇ ಹೆಸರಿಟ್ಟರು. ಅವರಿಗೆ ಚಿಕ್ಕಂದಿನಲ್ಲಿ ಎಂಟುವರ್ಷ ತುಂಬುವವರೆಗೂ ಬಾಲಗ್ರಹ ದೋಷವಿದ್ದಿತು; ಮೂರ್ಛೆ, ಅಪಸ್ಮಾರ, ಪ್ಲೀಹ, ಮತ್ತೆ ಮತ್ತೆ ಜ್ವರಬಾಧೆ ಇವು ಇವರನ್ನು ಕಾಡುತ್ತಿದ್ದುವು. ಆದರೆ ಎಂಟು ವರ್ಷಗಳು ಕಳೆದೊಡನೆ ಅವರ ಪ್ರತಿಭೆ ಪುಟವಿಟ್ಟ ಚಿನ್ನದಂತೆ ಬೆಳಗತೊಡಗಿತು. ಹತ್ತು ವರ್ಷ ವಯಸ್ಸಿನಲ್ಲೇ ಪಂಚಾಂಗವನ್ನು ಗುಣಿಸುತ್ತಿದ್ದರಂತೆ. ಹನ್ನೆರಡನೆಯ ಪ್ರಾಯದಲ್ಲೆ ಕಾಳಿ ದಾಸನ 'ಮೇಘಸಂದೇಶ' ಕಾವ್ಯವನ್ನು ಓದಿ, ಅದರಂತೆಯೇ ತಾವೊಂದು 'ಭೃಂಗಸಂದೇಶ'ವೆಂಬ ಕಾವ್ಯವನ್ನು ರಚಿಸಿದರು.

ಹದಿನಾಲ್ಕನೆಯ ವರ್ಷ ಮದುವೆಯಾಗಿ, ಹದಿನೆಂಟನೆಯ ವರ್ಷದಲ್ಲಿ ವಿರಕ್ತರಾಗಿ ತೀರ್ಥಯಾತ್ರೆ ಹೊರಟರು. ಕಾಶಿಯಲ್ಲಿದ್ದಾಗ ಬಂಗಾಳದ ನವ ದ್ವೀಪದಲ್ಲಿ ಒಂದು ಪಂಡಿತ ಪರಿಷತ್ತು ನಡೆಯುವುದೆಂದು ತಿಳಿದು ಅಲ್ಲಿಗೆ ಬಂದರು. ಅಲ್ಲಿ ಸಮಸ್ಯಾಪೂರಣ ಸ್ಪರ್ಧೆಯಲ್ಲಿ ಎಲ್ಲರಿಗಿಂತ ಮಿಗಿಲೆಂದು

ಎಂಟು ವರ್ಷಗಳ ಗಣಪತಿ ಶಾಸ್ತ್ರಿಗಳು ಪಂಚಾಂಗ ಗುಣಿಸುವಷ್ಟು ಪ್ರತಿಭಾವಂತರಾಗಿದ್ದರು !

ತೀರ್ಮಾನವಾಗಿ 'ಕಾವ್ಯಕಂಠ' ಎಂಬ ಪ್ರಶಸ್ತಿಯನ್ನು ಪಂಡಿತರಿಂದ ಪಡೆದರು. ಇದು 1900ರಲ್ಲಿ ನಡೆದ ಪ್ರಸಂಗ. ಆಗ ಗಣಪತಿ ಶಾಸ್ತ್ರಿಗಳಿಗೆ ಇಪ್ಪತ್ತೊಂದು ವರ್ಷ ವಯಸ್ಸಷ್ಟೆ. ಮುಂದಿನ ನಾಲ್ಕು ವರ್ಷಗಳು ಉತ್ತರ ಭಾರತದಲ್ಲಿ ಸುತ್ತಾಡಿ ಅನಂತರ ದಕ್ಷಿಣ ದೇಶಕ್ಕೆ ಮರಳಿದರು. ಕಾಂಚೀಪುರ, ಅರುಣಾಚಲ ಪ್ರದೇಶಗಳಲ್ಲಿ ಸುತ್ತಾಡುವಾಗ ಬ್ರಾಹ್ಮಣಸ್ವಾಮಿಯ ಸಂಪರ್ಕ ಒದಗಿ ಅವರೊಂದಿಗೆ ಒಂದು ವರ್ಷಕಾಲ ಇದ್ದರು. ಈ ಬ್ರಾಹ್ಮಣಸ್ವಾಮಿ ಅಥವಾ ಮೌನಸ್ವಾಮಿಯೇ ಮುಂದೆ ರಮಣ ಮಹರ್ಷಿಗಳೆಂದು ಲೋಕವಿಖ್ಯಾತ ರಾದವರು. ಅವರ ಹಿರಿಮೆಯನ್ನು ಮೊದಲು ಗುರುತಿಸಿದವರೇ ಗಣಪತಿ ಶಾಸ್ತ್ರಿಗಳು.

ಮುಂದೆ ಕೆಲವು ವರ್ಷಗಳು ಅಷ್ಟಾವಧಾನ ವಿದ್ಯೆಯಿಂದ ಬದುಕನ್ನು ನೂಕುತ್ತ, ಸಾಯಣಭಾಷ್ಯದೊಂದಿಗೆ ಋಗ್ವೇದವನ್ನು ಸ್ವರಸಹಿತವಾಗಿ ಅಧ್ಯ ಯನ ಮಾಡಿದರು. ಆದರೆ ತಪಸ್ಸಿನ ರುಚಿಯನ್ನು ಅರಿತುಕೊಂಡಿದ್ದರಾಗಿ ಮತ್ತೆ ಮತ್ತೆ ಬ್ರಾಹ್ಮಣಸ್ವಾಮಿಯ ಬಳಿಗೆ ಹೋಗುತ್ತಿದ್ದರು. ಇವರಿಬ್ಬರ ಸಮಾಗಮ ಇಬ್ಬರ ಬದುಕುಗಳಲ್ಲಿಯೂ ಮಾರ್ಪಾಟನ್ನು ತಂದಿತು. ಬ್ರಾಹ್ಮಣ ಸ್ವಾಮಿಯನ್ನು ಮಾರ್ಪಡಿಸಿ ಜಗತ್ತಿಗೆ ರಮಣ ಮಹರ್ಷಿಗಳನ್ನು ಕಾಣಿಸಿ ಕೊಟ್ಟವರು ಗಣಪತಿ ಶಾಸ್ತ್ರಿಗಳಾದರೆ, ಶಾಸ್ತ್ರಿಗಳನ್ನು ಮುನಿಗಳಾಗಿ ಮಾರ್ಪ ಡಿಸಿದವರು ಬ್ರಾಹ್ಮಣಸ್ವಾಮಿಗಳು. ಬ್ರಾಹ್ಮಣಸ್ವಾಮಿಯನ್ನು 'ರಮಣ' ನೆಂದು ಕರೆದದ್ದೇ ಗಣಪತಿ ಶಾಸ್ತ್ರಿಗಳು. ಈ ವ್ಯಕ್ತಿ ಋಷಿ ಮಾತ್ರವಲ್ಲ, ಮಹರ್ಷಿ ಎಂದು ಗುರುತಿಸಿ, ಅವರ ದಯೆ ತಮ್ಮ ಮೇಲೆ ಮೂಡಿಬಂದು ದಕ್ಕೆ ದೇವಿಗೆ ಕೃತಜ್ಞತೆಯನ್ನು ಸೂಚಿಸುವಂತೆ 'ಉಮಾಸಹಸ್ರ' ವೆಂಬ ಸೊಗಸಾದ ಕಾವ್ಯವನ್ನು ರಚಿಸಿದರು.

ತಮ್ಮ ತಂದೆಯಿಂದ ಇವರು ಆಯುರ್ವೇದ, ಜ್ಯೋತಿಷ, ತಂತ್ರಶಾಸ್ತ್ರ, ಶ್ರೀವಿದ್ಯೋಪಾಸನೆಗಳನ್ನು ಕಲಿತಿದ್ದರು. ಈಗ ತಪಶ್ಚರ್ಯೆಯಿಂದ ಅವನ್ನೆಲ್ಲ ರೂಢಿಸಿಕೊಂಡರು. ಕಾಂಚೀಪುರ, ಕನ್ಯಾಕುಮಾರಿ, ಆಂಧ್ರಪ್ರದೇಶ ಮತ್ತು ಉತ್ಕಲದೇಶಗಳ ನಡುವೆ ಇರುವ ಮಹೇಂದ್ರಪರ್ವತ, ಕಡಲತೀರದ ಗೋಕರ್ಣ ಇಲ್ಲೆಲ್ಲ ಅವರು ತಪಸ್ಸು ಮಾಡಿದರು. ಮತ್ತೆ ಮತ್ತೆ ಅರುಣಾ ಚಲಕ್ಕೆ (ಎಂದರೆ ತಿರುವಣ್ಣಾಮಲೆಗೆ) ಬರುತ್ತಿದ್ದರು; ರಮಣ ಮಹರ್ಷಿಗಳ ಸ್ಥಳವಲ್ಲವೆ ಅದು ? ಅಲ್ಲಿಯೇ ಆಮ್ರಗುಹೆಯಲ್ಲಿ ತಪಸ್ಸು ಮಾಡುತ್ತಿದ್ದಾಗ

ಒಮ್ಮೆ 'ಶಿರೋಗ್ರಂಥಿಭೇದ'ವಾಯಿತು; ಎಂದರೆ ನೆತ್ತಿಯ ಮೇಲಿನ ಗಂಟು ಹರಿದು ದಿವ್ಯಜ್ಞಾನ ಮೂಡಿಬಂದಿತು.

ಆಮೇಲೆ ತಮ್ಮ ಉಳಿದ ಬಾಳನ್ನೆಲ್ಲ ಋಗ್ವೇದದ ಅರ್ಥವನ್ನು ನಿರ್ಧರಿಸುವುದರಲ್ಲೇ ಕಳೆದರು. ಕೆಲವೊಮ್ಮೆ ದೇಶಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆಯೂ ಗಮನವನ್ನು ಹರಿಸುತ್ತಿದ್ದರು. ಎಲ್ಲ ಮತಧರ್ಮಗಳ ತಿರುಳೂ ಒಂದೇ ಎಂದು ಅವರು ನಂಬಿದ್ದು, 'ಸರ್ವಸಮಯ ಸಾಮರಸ್ಯ' ಎನ್ನುವ ವಿಚಾರವಾಗಿ ಆಲೋಚಿಸುತ್ತಿದ್ದರು. ಉಡುಪಿಯ ಹತ್ತಿರ ವಡಭಾಂಡೇಶ್ವರದಲ್ಲಿ ತಂಗಿದ್ದಾಗ 'ಘಂಟಾಶತಕ'ವೆಂಬ ಕಾವ್ಯವೊಂದನ್ನು ರಚಿಸಿದರು. ಇದಲ್ಲದೆ, ಮೇಲೆ ಹೇಳಿದ 'ಉಮಾಸಹಸ್ರ', 'ಪ್ರಚಂಡ ಚಂಡೀತ್ರಿಶತೀ', 'ಇಂದ್ರಾಣೀ ಸಪ್ತಶತೀ', 'ಅಗ್ನಿವಾಯ್ವಾದಿಗೀತಮಾಲಾ' ಮೊದಲಾದ ನೂರಾರು ಗ್ರಂಥಗಳನ್ನು ಅವರು ರಚಿಸಿದ್ದಾರೆ. ಹೊಸ ಶೈಲಿಯಲ್ಲಿ 'ಪೂರ್ಣಾ' ಎಂಬ ಹೆಸರಿನ ಸಂಸ್ಕೃತ ನೀಳ್ಗತೆಯನ್ನೂ ಬರೆದಿದ್ದಾರೆ. ಇವರು 1936ರ ಜುಲೈ 25ರಂದು ತೀರಿಕೊಂಡರು. ಆಗ ಅವರಿಗೆ ಅರವತ್ತರ ಹತ್ತಿರ ವಯಸ್ಸಷ್ಟೇ. ಅವರ ಶಿಷ್ಯರಲ್ಲಿ ಅರವಿಂದಾಶ್ರಮಕ್ಕೆ ಸೇರಿದ ಕಪಾಲಿ ಶಾಸ್ತ್ರಿಗಳು ಪ್ರಮುಖರು, ಪ್ರಸಿದ್ಧರು. ಪಾಂಡಿಚೇರಿಯ ಯೋಗಿ ಅರವಿಂದರೂ ಗಣಪತಿ ಮುನಿಗಳಿಂದ ಪ್ರಭಾವಿತರಾಗಿ ವೇದದ ಅರ್ಥ ಬಿಡಿಸುವುದರಲ್ಲಿಯೆ ನಿರತರಾದರು.

ಇಷ್ಟು ಹಿರಿಯ ಚೇತನವಾದ ಗಣಪತಿ ಮುನಿಗಳು ಭಟ್ಟರ ಸಲುವಾಗಿಯೇ ಎಂಬಂತೆ ಗೋಕರ್ಣಕ್ಕೆ ಬಂದು ತಂಗಿದ್ದಾಗ ಭಟ್ಟರು ಅವರನ್ನು ಆಶ್ರಯಿಸಿದುದು ಸೋಜಿಗವಲ್ಲ. ಮುನಿಗಳು ತಮ್ಮ ಗೋಕರ್ಣದ ಪ್ರವಾಸವನ್ನು ಮುಗಿಸಿ ಹೊರಟಾಗ ಅವರೊಂದಿಗೆ ಭಟ್ಟರೂ ಹೊರಟರು. ಭಟ್ಟರಿಗೆ ಚಿಕ್ಕಂದಿನಲ್ಲಿಯೆ ಪಾಠವಾಗಿದ್ದ ವೇದದ ಋಕ್ಕುಗಳಿಗೆ ಗಣಪತಿ ಮುನಿಗಳು ಅರ್ಥವನ್ನು ಬಿಡಿಸಿ ಹೇಳಿಕೊಡುತ್ತಿದ್ದರು; ಹಾಗೆಯೆ ಉಪನಿಷತ್ತುಗಳ ತಾತ್ಪರ್ಯವನ್ನೂ ಮನದಟ್ಟು ಮಾಡಿಕೊಡುತ್ತಿದ್ದರು. ಇದರಲ್ಲಿ ಭಟ್ಟರಿಗೆ ತುಂಬ ರುಚಿ ಹತ್ತಿದ್ದಿತು. ಈ ಕಲಿಕೆಯ ಸುಯೋಗವನ್ನು ಕಳೆದುಕೊಳ್ಳಲು ಅವರಿಗೆ ಮನಸ್ಸು ಬಾರದೆ, ಮುನಿಗಳೊಂದಿಗೆ ತಾವೂ ಹೊರಟರು. ಹಲವಾರು ಕ್ಷೇತ್ರಗಳಲ್ಲಿ ಸ್ವೇಚ್ಛೆಯಾಗಿ ಸುತ್ತಾಡಿದರು; ಹೋದೆಡೆಯಲ್ಲೆಲ್ಲ ತಪಸ್ಸು ಮಾಡಿದರು.

ಕಪಾಲಿ ಶಾಸ್ತ್ರಿಗಳು

ಛಂದೋದರ್ಶನ

ಗಣಪತಿ ಮುನಿಗಳಿಗೆ ತಿರುವಣ್ಣಾಮಲೆಯ (ಅರುಣಾಚಲದ) ರಮಣ ಮಹರ್ಷಿಗಳ ವಿಚಾರವಾಗಿ ಗಾಢವಾದ ವಿಶ್ವಾಸವಿದ್ದಿತೆಂದು ಮೊದಲೆ ತಿಳಿದೆವಲ್ಲವೆ ? ಅವರು ಅಲ್ಲಲ್ಲಿ ತಿರುಗಾಡುತ್ತ ಮತ್ತೆಮತ್ತೆ ತಿರುವಣ್ಣಾಮಲೆಗೆ ಬರುತ್ತಿದ್ದರು. ಈಗ ಭಟ್ಟರನ್ನೂ ಕರೆದುಕೊಂಡು ರಮಣ ಮಹರ್ಷಿಗಳ ಬಳಿ ಬಂದರು. ಗಣಪತಿ ಮುನಿಗಳಿಂದ ಸಾಕಾದಷ್ಟು ಸಂಸ್ಕಾರವನ್ನು ಪಡೆದುಕೊಂಡಿದ್ದ ಭಟ್ಟರ ಚೇತನ ಹೀಗೆ ಅರಳುವ ಅವಕಾಶವನ್ನು ಪಡೆದುಕೊಂಡಿತು. ಮುನಿಗಳಿಂದ ವೇದರಹಸ್ಯವನ್ನೂ ಉಪನಿಷತ್ತಿನ ತಾತ್ಪರ್ಯವನ್ನೂ ಅರಿತುಕೊಂಡು, ಅವರಿಂದಲೇ ಸಾಧನೆಯ ದಾರಿಯನ್ನೂ ಅಳವಡಿಸಿಕೊಂಡಿದ್ದರಿಂದ ಈಗ ರಮಣ ಮಹರ್ಷಿಗಳ ಸಾನ್ನಿಧ್ಯದಲ್ಲಿ ಬ್ರಹ್ಮಜ್ಞಾನದ ಅನುಭವವನ್ನು ಪಡೆಯುವುದಾಯಿತು. ರಮಣಮಹರ್ಷಿಗಳು ಅಖಂಡವಾದ ಸಹಜ ಸಮಾಧಿ ಸ್ಥಿತಿಯಲ್ಲಿ ಇರುತ್ತಿದ್ದುದನ್ನು ನೋಡಿ ತಾವೂ ಈ ಸ್ಥಿತಿಯನ್ನು ಮುಟ್ಟಬೇಕೆಂದು ಹಂಬಲಿಸಿದರು; ಅದಕ್ಕಾಗಿ ಅಗತ್ಯವಾದ ತೀವ್ರವಾದ ತಪಸ್ಸನ್ನು ಕೈಗೊಳ್ಳಲು ನಿರ್ಧರಿಸಿದರು.

ಇಷ್ಟರಲ್ಲಿ ಗುರುಗಳಾದ ಗಣಪತಿ ಮುನಿಗಳು ಅರುಣಾಚಲದಿಂದ ಹೊರಟರು; ಗುರುಭಕ್ತಿಯಿಂದ ಭಟ್ಟರೂ ಅವರೊಂದಿಗೆ ಹೊರಟರು. ಮದರಾಸು ಪ್ರಾಂತ್ಯದ ಪಡವೇಟ ಎಂಬ ಹಳ್ಳಿ ರೇಣುಕಾಂಬೆಯ ಕ್ಷೇತ್ರವೆಂದು ಪ್ರಸಿದ್ಧವಾಗಿದ್ದಿತು; ಅಷ್ಟು ಜನಜಂಗುಳಿಯೂ ಇಲ್ಲದೆ ಅದು ಪ್ರಶಾಂತವಾದ ಸನ್ನಿವೇಶವನ್ನೂ ಒದಗಿಸುವಂತಿದ್ದಿತು. ಗಣಪತಿ ಮುನಿಗಳು ತಮ್ಮ ಹೆಂಡತಿ ವಿಶಾಲಾಕ್ಷಮ್ಮನವರೊಂದಿಗೆ ಈ ಹಳ್ಳಿಗೆ ಬಂದು ಅಲ್ಲಿ ನಿರ್ಜನವಾದ ಸ್ಥಳವೊಂದರಲ್ಲಿ ಗುಡಿಸಲನ್ನು ಹಾಕಿಕೊಂಡು ತಪಸ್ಸಿಗೆ ಕೂತರು. ಅವರೊಂದಿಗೆ ಬಂದಿದ್ದ ಭಟ್ಟರು ಅಲ್ಲಿಯೇ ತಪಸ್ಸಿಗೆ ತೊಡಗಿದರು. ಆದರೆ ಈ ಬಾರಿ ಅವರ ತಪಸ್ಸು ತೀವ್ರವಾಗಿರಬೇಕೆಂದು ತೀರ್ಮಾನಿಸಿದರು.

ಅದು ಕ್ರಿಸ್ತಾಬ್ದ 1917ಕ್ಕೆ ಸರಿಯಾದ ಶಾಲೀವಾಹನ ಶಕೆ 1839ರ ಭಾದ್ರಪದಮಾಸವಾಗಿದ್ದಿತು; ನವಮಿಯಂದು ಭಟ್ಟರೂ ರೇಣುಕಾಂಬಾ ಸಾನ್ನಿಧ್ಯದಲ್ಲಿ ವಿಧ್ಯುಕ್ತವಾಗಿ ತಪಸ್ಸನ್ನು ಆರಂಭಿಸಿದರು. ಹೀಗಿರುವಾಗ ಕಾರ್ತಿಕಮಾಸದ ಹುಣ್ಣಿಮೆಯಂದು ಅವರ ಬಾಯಿಂದ ಏನೇನೋ ಹೊಸ ಮಂತ್ರಗಳು ಹೊರಬರುತ್ತಿದ್ದುದನ್ನು ಗಣಪತಿ ಮುನಿಗಳು ಗಮನಿಸಿದರು, ಎರಡು ದಿನಗಳು ಕಾದರು. ದಿನವೂ ಮಂತ್ರಗಳು ಹೊರಬರುತ್ತಿದ್ದುವು. ಗಣಪತಿ ಮುನಿಗಳು ಒಂದೇ ಮನಸ್ಸಿನಿಂದ ಇವನ್ನೆಲ್ಲ ಕೇಳಿದಾಗ ಅವು ವೇದ ಮಂತ್ರಗಳೆಂದು ಸ್ಪಷ್ಟವಾಯಿತು. ವೇದಗಳೆಲ್ಲವನ್ನೂ ಸಾಂಗವಾಗಿ ಅಧ್ಯಯನ ಮಾಡಿದ್ದ ಅವರಿಗೆ ಈ ಮಂತ್ರಗಳೆಲ್ಲ ಹೊಸದಾಗಿದ್ದುವು. ಭಟ್ಟರನ್ನು ನೋಡಿದರೆ ಹೊರಗಿನ ಯಾವ ಅರಿವೂ ಇಲ್ಲದೆ ಸಮಾಧಿ ಸ್ಥಿತಿಯಲ್ಲಿದ್ದರು. ಅವರ ಬಾಯಿಂದ ಬರುತ್ತಿದ್ದ ಋಕ್ಕುಗಳು ಅವರಿಗೆ ತಿಳಿಯದೆ ಮೂಡಿ ಕೊಳ್ಳುತ್ತಿದ್ದುವು. ಗಣಪತಿ ಮುನಿಗಳಿಗೆ ಆಶ್ಚರ್ಯವಾಯಿತು. ಆದರೆ ಸಂದರ್ಭವನ್ನು ಕಳೆದುಕೊಳ್ಳಬಾರದೆಂದು, ಭಟ್ಟರ ಬಾಯಿಂದ ಬರುತ್ತಿದ್ದ ಮಂತ್ರಗಳನ್ನೆಲ್ಲ ತಾವು ಬರೆದಿಟ್ಟುಕೊಂಡರು.

ಅವರು ಸಮಾಧಿಸ್ಥಿತಿಯಲ್ಲಿದ್ದಾಗ ಹೊರಬಂದ ಮಂತ್ರಗಳಲ್ಲಿ ಎಷ್ಟೋ ತೀರ ಅಸ್ಪಷ್ಟವಾಗಿದ್ದುವು; ಮತ್ತೆ ಹಲವು ತುಂಬ ವೇಗವಾಗಿ ಹರಿದುಬಂದು ಗಣಪತಿಮುನಿಗಳ ಬರವಣಿಗೆಯ ಗತಿಯನ್ನು ಮೀರಿದುವು. ಇನ್ನಷ್ಟು ಮಂತ್ರಗಳು ಪೂರ್ಣವಾಗಿ ಮೂಡಿಕೊಳ್ಳದೆ ಖಂಡಖಂಡವಾಗಿ ನಿಂತವು. ಇವನ್ನೆಲ್ಲ ಬಿಟ್ಟು ಉಳಿದವನ್ನು ಗಣಪತಿ ಮುನಿಗಳು ಬರೆದುಕೊಂಡರು. ಛಂದಸ್ಸು, ಸ್ವರವ್ಯವಸ್ಥೆ, ಶಬ್ದಗಳು, ಅರ್ಥ ಮತ್ತು ತತ್ತ್ವದರ್ಶನ ಎಲ್ಲದರಲ್ಲಿಯೂ ಇವು ವೇದಮಂತ್ರಗಳೇ ಎಂದು ಅವರು ದೃಢಪಡಿಸಿಕೊಂಡರು. ಒಟ್ಟು ಅವರ ಸಂಗ್ರಹದಲ್ಲಿ 448 ಋಕ್ಕುಗಳಾದುವು. ಅವುಗಳನ್ನು ಅವರೇ ಎಂಟು ಅನುವಾಕಗಳಲ್ಲಿ ಐವತ್ತು ಸೂಕ್ತಗಳಾಗಿ ವಿಂಗಡಿಸಿ, ಇದಕ್ಕೆ 'ಛಂದೋದರ್ಶನ' ಎಂಬ ಹೆಸರನ್ನು ಕೊಟ್ಟರು.

ಆ ವೇಳೆಗೆ ಭಟ್ಟರಿಗೆ ತಾವಾಗಿ ಮಂತ್ರಗಳನ್ನು ಹೆಣೆಯುವಷ್ಟೇನು ಸಂಸ್ಕೃತ ಬರುತ್ತಿರಲಿಲ್ಲ, ಅವರು ಸಾಂಪ್ರದಾಯಿಕವಾಗಿ ಕಲಿತದ್ದು ವೇದಪಾಠವನ್ನಷ್ಟೆ. ಆದುದರಿಂದ ಅವರ ಗುರುಗಳಾದ ಗಣಪತಿ ಮುನಿಗಳಿಗೆ ಇವೆಲ್ಲ ತಾವಾಗಿ ಮೂಡಿಕೊಂಡು ಬಂದ ವೈದಿಕಮಂತ್ರಗಳೇ, ತಮ್ಮ ಶಿಷ್ಯ ತನ್ನ

ಸಮಾಧಿಸ್ಥಿತಿಯಲ್ಲಿ ದೈವರಾತರಿಗೆ ದರ್ಶನವಾದ
ಮಂತ್ರಗಳನ್ನು ಗಣಪತಿಮುನಿಗಳು ಬರೆದುಕೊಂಡರು

ಬುದ್ಧಿಯಿಂದ ಕಲ್ಪಿಸಿದುವಲ್ಲ ಎಂಬುದು ಮನವರಿಕೆಯಾಯಿತು. ಹಾಗೆ ಮಂತ್ರಗಳು ಕಾಣುವುದು ಋಷಿಗಳಿಗೆ ಮಾತ್ರ; ಅದಕ್ಕಾಗಿಯೇ ಋಷಿಗಳನ್ನು 'ಮಂತ್ರದ್ರಷ್ಟಾರ'ರೆಂದು ಕರೆಯುತ್ತೇವೆ. ಹಿಂದೆ ವಸಿಷ್ಠ, ವಿಶ್ವಾಮಿತ್ರ, ವಾಮದೇವ ಮೊದಲಾದ ಋಷಿಗಳಿಗೆಲ್ಲ ಕಾಣಿಸಿಕೊಂಡ ಮಂತ್ರಗಳನ್ನೇ ಕಲೆಹಾಕಿ 'ಋಗ್ವೇದ'ವೆಂದು ನಿರ್ದೇಶಿಸಿದರು. ಆ ಕಾಲದಿಂದ ಸಾವಿರಾರು ವರ್ಷಗಳವರೆಗೆ ಮತ್ತೆ ವೇದಮಂತ್ರಗಳು ಹೀಗೆ ಕಾಣಿಸಿಕೊಂಡ ಉಲ್ಲೇಖ ವಿಲ್ಲ. ಈಗ ಗಣೇಶಭಟ್ಟರಿಗೆ ಕಾಣಿಸಿಕೊಂಡುವು ವೇದಮಂತ್ರಗಳೇ ಎಂದು ಗುರುಗಳಿಗೆ ಸ್ಪಷ್ಟವಾದಾಗ ತಮ್ಮ ಶಿಷ್ಯನನ್ನು 'ಋಷಿ' ಯೆಂದು ಕರೆದರು; ಭಟ್ಟರ ಗೋತ್ರ ವಿಶ್ವಾಮಿತ್ರವಾದುದರಿಂದಲೂ ಮತ್ತು ವಿಶ್ವಾಮಿತ್ರನು ತನ್ನ ಗೋತ್ರದಲ್ಲಿಯೇ ಶುನಃಶೇಫನನ್ನು ಸೇರಿಸಿಕೊಂಡು ದೈವರಾತನನ್ನು ಮಾಡಿ ಋಷಿಯಾಗಿಸಿದ್ದರಿಂದಲೂ ಗಣಪತಿಮುನಿಗಳು ಭಟ್ಟರಿಗೆ 'ದೈವರಾತ-ವೈಶ್ವಾಮಿತ್ರ' ಎಂದು ಹೆಸರನ್ನು ಕೊಟ್ಟರು. ಮುಂದೆ ಭಟ್ಟರು ಋಷಿ ದೈವರಾತ ರೆಂದೇ ಪ್ರಸಿದ್ಧರಾದರು.

ಇಷ್ಟು ಮಾತ್ರವಲ್ಲ, ವಾಸಿಷ್ಠ ಗಣಪತಿ ಮುನಿಗಳು ತಮ್ಮ ಶಿಷ್ಯನ ಬಗ್ಗೆ ತುಂಬ ಅಭಿಮಾನವನ್ನು ತಳೆದಿದ್ದುದರಿಂದಲೂ, ವೇದವಾಙ್ಮಯದ ಬಗ್ಗೆ ವಿಶೇಷ ವಾದ ಆದರ ಅವರಿಗಿದ್ದುದರಿಂದಲೂ ತಾವೇ ತಮ್ಮ ಶಿಷ್ಯನ 'ಛಂದೋ ದರ್ಶನ'ಕ್ಕೆ ಸಂಸ್ಕೃತದಲ್ಲಿ 'ವಾಸಿಷ್ಠಾನ್ವಯ ಭಾಷ್ಯ' ವೆಂಬ ವ್ಯಾಖ್ಯಾನವನ್ನು ಬರೆದು ಋಕ್ಕುಗಳಿಗೆಲ್ಲ ಪದಪಾಠಗಳನ್ನೂ ಸ್ವರನಿರ್ದೇಶನವನ್ನೂ ಮಾಡಿ ದುದಲ್ಲದೆ, ಒಂದೊಂದು ಋಕ್ಕಿನ ಅರ್ಥವನ್ನೂ ಸ್ವಾರಸ್ಯವನ್ನೂ ಇಂಗಿತ ವನ್ನೂ ಸರಳವಾಗಿ ವಿವರಿಸಿದರು. ಶಿಷ್ಯನ ಬಾಯಿಂದ ಬಂದುದನ್ನು ಗುರು ಗಳೇ ಬರೆಯುವುದಾಗಲಿ ಹಾಗೆ ಬರೆದುಕೊಂಡುದಕ್ಕೆ ತಾವೇ ಭಾಷ್ಯ ಬರೆ ಯುವುದಾಗಲಿ ತುಂಬ ಅಪರೂಪವಲ್ಲವೆ? ಇದು ಗಣಪತಿ ಮುನಿಗಳ ಸೌಜನ್ಯ ವನ್ನೂ ಶಿಷ್ಯವಾತ್ಸಲ್ಯವನ್ನೂ ಔದಾರ್ಯವನ್ನೂ ಸತ್ಯಪಕ್ಷಪಾತವನ್ನೂ ತೋರಿಸುತ್ತದೆ. ದೈವರಾತರಿಂದ ಬಂದುದು ಋಗ್ವೇದಕ್ಕೆ ಸಮನಾದ ಇನ್ನೊಂದು ವೇದವೇ ಎಂದು ಅವರು ಲೋಕಕ್ಕೆ ಸಾರಿದರು. ಇಂಥ ಗುರು ಗಳನ್ನು ಪಡೆದುಕೊಂಡ ಭಟ್ಟರು ಧನ್ಯರು. ಈ ಛಂದೋದರ್ಶನವಾಗುವ ಕಾಲಕ್ಕೆ ಭಟ್ಟರಿಗೆ ಬರಿಯ ಇಪ್ಪತ್ತೈದು ವರ್ಷಗಳ ಪ್ರಾಯುವಷ್ಟೆ; ಆಗಿನ್ನೂ ಬ್ರಹ್ಮಚಾರಿ.

ತಪಸ್ಸಿನ ಬಲ್ಮೆ

ಮಂತ್ರದರ್ಶನವಾಗುವುದು ಸಾಮಾನ್ಯವಲ್ಲ. ಎಷ್ಟೋ ದೊಡ್ಡ ವಿದ್ವಾಂಸರಿಗೂ, ಘನಪಂಡಿತರಿಗೂ ದಕ್ಕದ ಲಾಭ ಇದು. ವೈದಿಕ ಸಾಹಿತ್ಯ ವನ್ನೆಲ್ಲ ಉಂಡು, ಕುಡಿದು, ತೇಗಿರುವ ಪಂಡಿತರು ಎಲ್ಲ ಕಾಲಗಳಲ್ಲಿಯೂ ಇದ್ದಾರೆ; ಮಂತ್ರದ ನೀರಿನಲ್ಲಿ ಲೀಲಾಜಾಲವಾಗಿ ಈಜಾಡಿದವರಿದ್ದಾರೆ. ಆದರೆ ಅವರಲ್ಲಿ ಯಾರಿಗೂ ಹೀಗೆ ಮಂತ್ರದರ್ಶನ ಆಗದಿರುವುದು ಏಕೆ ? ಅದಕ್ಕೆ ಗಣಪತಿಮುನಿಗಳ ಉತ್ತರ 'ತಪಸ್ಸು ಸಾಲದುದರಿಂದ' ಎಂದು. ಮಂತ್ರದರ್ಶನವಾಗಬೇಕಾದರೆ ತಪಸ್ಸು ಅಗತ್ಯವಾದುದು; ತಪಸ್ಸಿನ ಸಂಸ್ಕಾರ ವಿಲ್ಲದೆ ಮಂತ್ರಗಳು ಕಾಣುವುದಿಲ್ಲ. ಭಟ್ಟರಿಗೆ ವಿದ್ಯೆ ಅಷ್ಟಷ್ಟೇ ಆದರೂ, ಚಿಕ್ಕಂದಿನಿಂದಲೂ ತಪಸ್ಸಿನ ಮೇಲೆ ಒಲವಿದ್ದಿತು. ಸಂದರ್ಭ ದೊರೆತಾಗಲೆಲ್ಲ ತಪಸ್ಸಿಗೆ ಕೂಡುತಿದ್ದರು. ಗಣಪತಿ ಮುನಿಗಳನ್ನು ಸೇರಿದ ಮೇಲಂತೂ ಈ ತಪಸ್ಸಿನ ಹವ್ಯಾಸ ಹೆಚ್ಚಿತು. ರಮಣ ಮಹರ್ಷಿಗಳ ದರ್ಶನವಾದುದು ತಪ ಸ್ಸಿನ ಮಹಿಮೆಯನ್ನು ಅವರಿಗೆ ಸ್ಪಷ್ಟಪಡಿಸಿದಂತಾಯಿತು. ರೇಣುಕಾಂಬೆಯ ಸನ್ನಿಧಿಯಲ್ಲಿ ಅವರು ತಪಸ್ಸಿಗೆ ಕೂತಾಗ ತೀವ್ರವಾದ ತಪಸ್ಸು ಸಾಗಿತು. ಮಂತ್ರದರ್ಶನವಾಗುವುದು ಸಾಧ್ಯವಾದುದು ಹೀಗೆ.

ವೇದದ ಅರ್ಥವನ್ನು ಅರಿಯಬೇಕಾದರೆ ಯೋಗದ ದಾರಿಯನ್ನು ಬಿಡ ಬಾರದು ಎಂದೇ ಗಣಪತಿಮುನಿಗಳ ಕಲ್ಪನೆಯಾಗಿದ್ದಿತು; ಶಿಷ್ಯನಿಗೆ ಮಂತ್ರ ದರ್ಶನವಾದ ಬಗೆಯನ್ನು ಗಮನಿಸಿದ ಮೇಲೆ ಆ ಕಲ್ಪನೆ ದೃಢವಾಯಿತು. ಅವರ ಗುರುಗಳಾಗಿದ್ದ ರಮಣಮಹರ್ಷಿಗಳೂ ಈ ಕಲ್ಪನೆಯನ್ನೇ ಅವಲಂಬಿ ಸಿದ್ದರು; ಅವರ ಶಿಷ್ಯಪ್ರಾಯರಾದ ಅರವಿಂದರೂ ಇದೇ ಕಲ್ಪನೆಯ ಸಾರ್ಥ ಕತೆಯನ್ನು ತಮ್ಮ ಬಾಳುವೆಯಲ್ಲೇ ಅನುಭವಿಸಿದ ಮೇಲೆ ವೇದ-ಯೋಗ ಎರ ಡರ ಸಮನ್ವಯವನ್ನು ಬರಹದಲ್ಲಿ ಸ್ಪಷ್ಟಪಡಿಸಲು ಸಿದ್ಧರಾದರು. ಈ ಅನು ಭವದ ಆಧಾರದ ಮೇಲೆ ದೈವರಾತರು ಕಾಲಕ್ರಮದಲ್ಲಿ 'ವೇದಾರ್ಥಕಲ್ಪಲತಾ' ಎಂಬ ಗ್ರಂಥವನ್ನೂ 'ಯೋಗ-ಸುಧಾ' ಎಂಬ ಇನ್ನೊಂದು ಗ್ರಂಥವನ್ನೂ

ಸಿದ್ಧಪಡಿಸಿದರು. ಈ ಬರಹಗಳಿಂದ ಸಮನ್ವಯದ ಸ್ವಾರಸ್ಯ ಸ್ಪಷ್ಟವಾಗು ತ್ತದೆ; ಸಮನ್ವಯದ ದಾರಿ ಸುಗಮವಾಗುತ್ತದೆ.

ವೇದವಿದ್ವಾಂಸರೆಲ್ಲ ದೈವರಾತ ಋಷಿಗಳ 'ಛಂದೋದರ್ಶನ'ವನ್ನು ಮೆಚ್ಚಿಕೊಂಡರು. ಪುಣೆಯ ಮಹಾಮಹೋಪಾಧ್ಯಾಯ ದತ್ತೋ ವಾಮನ ಪೋದ್ದಾರರು "ಸಾವಿರಾರು ವರ್ಷಗಳು ಕಳೆದ ಮೇಲೆ ಕಾಣಿಸಿಕೊಳ್ಳುತ್ತಿರುವ ವೇದಸಾಹಿತ್ಯ ಇದು" ಎಂದರು. ವಿದ್ವಾಂಸರಾದ ಆಚಾರ್ಯ ವಿನೋಬಾ ಭಾವೆಯವರು ಇದನ್ನು ಕಂಡು ಬೆರಗಾಗಿ "ಇದು ಹೊಸ ಋಗ್ವೇದ!" (ಮರಾಠಿಯಲ್ಲಿ "ಹಾ ನವೀನ್ ಋಗ್ವೇದ ಆಹೆ!") ಎಂದು ಉದ್ಗಾರ ತೆಗೆದರು. ಛಂದೋದರ್ಶನದಲ್ಲಿ ತೋರಿಬರುವ ಆಧ್ಯಾತ್ಮಿಕಸಂಪತ್ತು, ಋಕ್ಕುಗಳ ಸೌಂದರ್ಯ, ಭಾಷೆಯ ಶುದ್ಧಿ ಎಲ್ಲ ಎಲ್ಲರನ್ನೂ ತಲೆದೂಗಿಸುವಂಥವು. ಗಣಪತಿ ಮುನಿಗಳ ಭಾಷ್ಯವೂ ಬಿಗಿಯಾದ, ಬಂಧುರವಾದ ಬರಹ; ಸಂಸ್ಕೃತದಲ್ಲಿ ಇಷ್ಟು ಸರಳವಾದರೂ ಪ್ರೌಢವಾದ ವ್ಯಾಖ್ಯಾನಗಳು ವಿರಳ. ದೈವರಾತರ ಛಂದೋದರ್ಶನವನ್ನೂ ಗಣಪತಿ ಮುನಿಗಳ ಅನ್ವಯಭಾಷ್ಯವನ್ನೂ ರಂಗನಾಥ ರಾ. ದಿವಾಕರರ ಪ್ರಯತ್ನದಿಂದ ಮುಂಬಯಿ ಭಾರತೀಯ ವಿದ್ಯಾ ಭವನದವರು ಅಚ್ಚುಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಋಕ್ಕುಗಳಿಗೆ ಸರಳವಾದ ಇಂಗ್ಲಿಷ್ ಅನುವಾದವೂ ಇದೆ.

ಋಷಿಜೀವನಕ್ಕೊಂದು ಆಶ್ರಮ

ಹೀಗೆ ಗುರುಗಳ ಸಾನ್ನಿಧ್ಯದಲ್ಲಿ ಛಂದೋದರ್ಶನ ಸಿದ್ಧವಾಗಿ ಗಣೇಶ ಭಟ್ಟರು ಋಷಿ ದೈವರಾತರಾದಮೇಲೆ ಗೋಕರ್ಣಕ್ಕೆ ಮರಳಿದರು. ಗೃಹ ಸ್ಥಾಶ್ರಮಕ್ಕೆ ನಾಂದಿಯಾಗಿ ದೈವರಾತರು ಶ್ರದ್ಧಾದೇವಿಯೆಂಬಾಕೆಯನ್ನು ಮದುವೆಯಾಗಿ ಗೋಕರ್ಣಕ್ಷೇತ್ರಕ್ಕೆ ಸಮೀಪದಲ್ಲೇ ಒಂದೆರಡು ಮೈಲಿಗಳ ದೂರದಲ್ಲಿ ಆಶ್ರಮವೊಂದನ್ನು ಸ್ಥಾಪಿಸಿಕೊಂಡರು. ಇದು 1919ರ ಸುಮಾ ರಿಗೆ, ಎಂದರೆ ಛಂದೋದರ್ಶನವಾದ ಎರಡು ವರ್ಷಗಳನಂತರ, ಈ ಆಶ್ರ ಮಕ್ಕೆ 'ಗೋರಕ್ಷಾಬ್ರಹ್ಮಚರ್ಯಾಶ್ರಮ' ಎಂದು ಹೆಸರಿಟ್ಟರು. ಹಸುಗಳನ್ನು ಸಾಕುವುದೆಂದರೆ ಅವರಿಗೆ ಮೊದಲಿನಿಂದಲೂ ಒಲವು; ಮತ್ತೆ ಮನೆತನದಲ್ಲಿ ಬಂದದ್ದು ಬೇಸಾಯ. ಎರಡನ್ನೂ ಕಟ್ಟಿಕೊಂಡರೆ ಬದುಕಿಗೆ ದಾರಿಯಾಯಿತು. ಬಿಡುವಿನ ವೇಳೆಯಲ್ಲಿ ವೇದವನ್ನು ಕುರಿತು ಚಿಂತನೆ ಮಾಡುವುದು, ಬಂದ ಮಾಣಿಗಳಿಗೆ ಕಲಿಸುವುದು, ತಪಸ್ಸು ಮಾಡುವುದು, ತಮಗೆ ಅಗತ್ಯವೆಂದು ಕಂಡದ್ದನ್ನು ಬರೆದಿಡುವುದು.

ಈ ಆಶ್ರಮದಲ್ಲಿ ಬೇಸಾಯವನ್ನು ಕಲಿಸಲೂ ಒಂದು ಶಾಲೆಯನ್ನು ಅಳವಡಿಸಿದ್ದರು ; ಗೋಶಾಲೆಯಂತೂ ಬೇಕಲ್ಲ ? ಮತ್ತೆ, ಯೋಗವನ್ನು ಕಲಿಸಲೂ ವ್ಯವಸ್ಥೆ ಮಾಡಿದ್ದರು. ವೇದಪಾಠವಂತೂ ಸರಿಯೇ ಸರಿ. ಜೊತೆಗೆ ಹವನ-ಹೋಮಗಳನ್ನು ವಿಧಿಯಂತೆ ಅಚ್ಚುಕಟ್ಟಾಗಿ ನಡೆಸಲು ಒಂದು ಹೋಮ ಶಾಲೆ. ಸುತ್ತಲೂ ಗದ್ದೆ, ತೋಟಗಳು ; ಅಲ್ಲಲ್ಲಿ ಚಿಕ್ಕ ವಾದರೂ ಚೊಕ್ಕವಾದ ಗುಡಿಸಲುಗಳು. ಹಿಂದಿನ ಕಾಲದಲ್ಲಿ ಆಶ್ರಮಗಳು ಹೇಗಿರುತ್ತಿದ್ದುವೆಂದು ಕಾವ್ಯದಲ್ಲಿ ಓದುವೆವೋ ಹಾಗೆಯೆ ಇದೂ ಇದ್ದಿತೆನ್ನ ಬಹುದು. ಪ್ರಶಾಂತವಾದ, ರಮಣೀಯವಾದ ಸನ್ನಿವೇಶದಲ್ಲಿ ಅಧ್ಯಾತ್ಮದ ಬಲವನ್ನು ಊರ್ಜಿತಗೊಳಿಸಿಕೊಳ್ಳಲು ತಕ್ಕ ಸಾಧನೆ. ಆದರೆ ಆಶ್ರಮದ ಬಾಳಿನಲ್ಲಿ ಶಿಸ್ತು, ಕಟ್ಟು-ನಿಟ್ಟು, ಸಂಯಮ ಹೆಚ್ಚಿದ್ದಿತು. ವಿದ್ಯಾರ್ಥಿಗಳು ಹಿಂದಿನ ಕಾಲದಲ್ಲಿ ಮಾಡುತ್ತಿದ್ದಂತೆ ಭಿಕ್ಷಾನ್ನವನ್ನು ಪಡೆದುಕೊಳ್ಳಬೇಕಾ

ಗಿದ್ದಿತು; ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ಕೆಲಸ ಮಾಡಬೇಕಾಗಿದ್ದಿತು; ದಿನವೂ ವ್ಯಾಯಾಮ, ಯೋಗಾಸನಗಳು, ವೇದಪಾಠಗಳು ತಪ್ಪದೆ ನಡೆಯ ಬೇಕಾಗಿದ್ದುವು. ಹೇಗೆಂದರೆ ಹಾಗೆ ಬಾಳನ್ನು ಕಳೆಯಲು, ಮನಸ್ಸಿಗೆ ಬಂದು ದನ್ನು ಕಲಿಯಲು ಅಲ್ಲಿ ಅವಕಾಶವಿರಲಿಲ್ಲ.

ಯುಗಧರ್ಮಕ್ಕೆ ಇದು ದೂರವಾಗಿದ್ದಿತೆಂದು ಬೇರೆ ಹೇಳಬೇಕೆ ? ಈಗಿನ ಕಾಲದ ವಿದ್ಯಾರ್ಥಿಗಳಿಗೆ ಶಿಸ್ತು ಸಾಲದೆಂದೂ, ಪ್ರಲೋಭನೆಗಳು ಹೆಚ್ಚೆಂದೂ, ಉದಾತ್ತವಾದ ಧ್ಯೇಯ ಇಲ್ಲವೆಂದೂ ತಿಳಿದವರ ದೂರು ಇದೆ ಯಲ್ಲವೆ ? ಇತರೆಡೆ ವಿದ್ಯಾರ್ಥಿಗಳಿಗೆ ಅಷ್ಟೊಂದು ಸ್ವಾತಂತ್ರ್ಯ ಇರುವಾಗ ಇಲ್ಲಿ ಕಟ್ಟು-ನಿಟ್ಟಿನ ಕಟಪಟೆಯನ್ನು ಎಷ್ಟು ಮಂದಿ ಸಹಿಸಿಕೊಂಡಾರು ? ಒಂದೆರಡು ವರ್ಷ ಆಶ್ರಮದ ಗುರುಕುಲ ಎಂದುಕೊಂಡಿದ್ದಂತೇ ನಡೆಯಿತು ; ಸುಮಾರು ಮಂದಿ ಹುಡುಗರು ಸೇರಿ ವೇದವಿದ್ಯೆಯನ್ನೂ ಕಲಿತರು. ಮುಂದೆ ವಿದ್ಯಾರ್ಥಿಗಳ ಆಸಕ್ತಿಯೂ ಸಂಖ್ಯೆಯೂ ಬರುಬರುತ್ತ ಇಳಿಮುಖವಾಗ ತೊಡಗಿತು. ಹಾಗೂ ಹೀಗೂ ಇಪ್ಪತ್ತು ವರ್ಷಗಳ ಕಾಲ ಕುಂಟುತ್ತ ಮುಗ್ಗರಿಸುತ್ತ ಸಾಗಿಬಂದ ಗುರುಕುಲ, ಭಟ್ಟರ ತಟ್ಟಿನಂತೆ ಕಾಲುಕಚ್ಚಿ ನಿಂತಿತು. ಗುರುಕುಲವಿದ್ದಲ್ಲಿ ಗುರುಗಳು ಮಾತ್ರ ಉಳಿದರು ; ಶಾಲೆಗಳಿದ್ದಲ್ಲಿ ಆಶ್ರಮ ಒಂದು ಉಳಿಯಿತು. ಋಷಿಗೆ ಛಂದೋದರ್ಶನವಾಗಿದ್ದರೂ ಯುಗಧರ್ಮವನ್ನು ಎದುರಿಸುವುದು ಕಷ್ಟವೇ ಆಯಿತು.

ಮುಂದೆ 1962ರಲ್ಲಿ ಜಂಝೂವಾತದಿಂದಾಗಿ ಪಕ್ಕದ ಸಮುದ್ರ ಉಕ್ಕಿ ಬಂದು ಆಶ್ರಮವನ್ನು ಕೊಚ್ಚಿಕೊಂಡು ಹೋಯಿತು. ಇದ್ದ ಗುಡಿಸಲುಗಳೂ ಶಾಲೆಗಳೂ ಗದ್ದೆ, ತೋಟಗಳೂ ನೀರಿನಲ್ಲಿ ಹಾಳಾದುವು. ಗುರುಕುಲವಂತೂ ಮೊದಲೇ ಮರೆಯಾಗಿದ್ದಿತು; ಈಗ ಆಶ್ರಮವೂ ಕಣ್ಮರೆಯಾಯಿತು. ಆದರೆ ಋಷಿಗಳಿದ್ದಲ್ಲಿ ಆಶ್ರಮವಲ್ಲವೆ ? ದೈವರಾತರು ಮಟ್ಟಿಗೆ ಆ ಸ್ಥಳದಿಂದ ಕದಲದೆ, ಸಮುದ್ರದ ನೆರೆ ಹಿಂದೆಗೆದ ನಂತರ ಮತ್ತೆ ಸಣ್ಣದೊಂದು ಆಶ್ರಮ ವನ್ನು ಕಟ್ಟಿಕೊಂಡರು. ಇದಾದ ಒಂದು ವರ್ಷಕ್ಕೆ ಭಾರತದ ರಾಷ್ಟ್ರಪತಿ ಗಳಾಗಿದ್ದ ಬಾಬು ರಾಜೇಂದ್ರಪ್ರಸಾದರು ಈ ಆಶ್ರಮಕ್ಕೆ ದಯಮಾಡಿಸಿ ದರು. ದೈವರಾತರ ಶಿಷ್ಯರಾಗಿದ್ದ ರಂಗನಾಥ ದಿವಾಕರರಿಂದ ರಾಜೇಂದ್ರ ಪ್ರಸಾದರಿಗೆ ದೈವರಾತರ ಪರಿಚಯವಾಗಿದ್ದಿತು; ಅವರಿಬ್ಬರೂ ಸ್ವಾತಂತ್ರ್ಯ ಸಮರದಲ್ಲಿ ಒಡನಾಡಿಗಳಾಗಿದ್ದು ದೇಶದ ಆಡಳಿತದಲ್ಲಿಯೂ ಸಹೋದ್ಯೋಗಿ

ರಾಜರ್ಷಿ ಮತ್ತು ಮಹರ್ಷಿಗಳ ಅಪೂರ್ವ ಸಂಗಮ

ಗಳಾಗಿದ್ದವರಷ್ಟೆ ? ಈಗ ರಾಜೇಂದ್ರಪ್ರಸಾದರ ಮತ್ತು ದೈವರಾತರ ನಡುವೆ ಧಾರ್ಮಿಕ ಸಂಬಂಧ ಬೆಳೆಯಿತು. ರಾಜೇಂದ್ರಪ್ರಸಾದರು ರಾಜರ್ಷಿ, ದೈವರಾತರು ಬ್ರಹ್ಮರ್ಷಿ; ರಾಷ್ಟ್ರಪತಿಯು ಗೋಕರ್ಣದ ಈ ಋಷಿಯನ್ನು ತನ್ನ ಗುರುಗಳೆಂದು ಬಗೆದಿದ್ದರು. ಅವರ ವೇದಪಾಠದ ಧ್ವನಿಮುದ್ರಿಕೆ ದಿನವೂ ಬೆಳಿಗ್ಗೆ ರಾಷ್ಟ್ರಪತಿಗಳ ಖಾಸಾ ಕೋಣೆಯಲ್ಲಿ ಮೊಳಗುತ್ತಿದ್ದಿತು.

ಹಾಗಾಗಿ ರಾಷ್ಟ್ರಪತಿಯು ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿದಾಗ ಗೋಕರ್ಣಕ್ಕೆ ಬಂದು ತಮ್ಮ ಗುರುಕಲ್ಪರಾಗಿದ್ದ ದೈವರಾತರ ಆಶ್ರಮವನ್ನು ನೋಡಿಹೋಗಲು ನಿಶ್ಚಯಿಸಿದ್ದರು. ಆದರೆ ಅವರು ಬರುವ ವೇಳೆಗೆ ಆಶ್ರಮದ ಸ್ವಾರಸ್ಯವೆಲ್ಲ ನೀರುಪಾಲಾಗಿದ್ದಿತು ! ಆದರೆ ಋಷಿಯಿದ್ದೆಡೆ ಅಹಿಂಸೆಯ ವಾತಾವರಣವಿರುವುದೆಂದು ಕೇಳಿದ್ದವರಿಗೆ ಇದೊಂದು ನಿದರ್ಶನ ವಾಯಿತು. ದೈವರಾತರ ಸಣ್ಣ ಆಶ್ರಮದಲ್ಲಿದ್ದ ಅಗಾಧವಾದ ಶಾಂತಿ ರಾಷ್ಟ್ರಾಧ್ಯಕ್ಷರ ಮನಸ್ಸನ್ನು ಸೆಳೆದು ಹೃದಯವನ್ನು ಸೂರೆಗೊಂಡಿತು. ಅವರಿಗೆ ಅದೊಂದು ಹಿಂದೆಂದೂ ಕಂಡರಿಯದ ಅನುಭವವಾಯಿತು. ಹಿಂದೆ ರಾಜ ಮಹಾರಾಜರು, ಚಕ್ರವರ್ತಿಗಳು ಆಗಾಗ ಋಷಿಗಳ ಆಶ್ರಮಕ್ಕೆ ಬಂದು ಅವರಿಂದ ಸರಳ ಸತ್ಕಾರ ಪಡೆದು ಧನ್ಯರಾಗಿ ಹೋಗುತ್ತಿದ್ದರಂತೆ. ಹಾಗೆಯೇ ಈಗ ಇಡೀ ದೇಶದ ಅಧಿಪತಿಯು ದೈವರಾತರ ಗುಡಿಸಿಲಿಗೆ ಬಂದುದು ಯಾವ ರೀತಿಯಿಂದಲೂ ಅಲ್ಲ, ಯಾವ ಲೌಕಿಕ ಪ್ರಯೋಜನವನ್ನು ಬಯಸಿಯೂ ಅಲ್ಲ. ನಮ್ರತೆಯಿಂದ, ಭಕ್ತಿಯಿಂದ, ಅಂತಃಕರಣದ ತೃಪ್ತಿಯ ಬಯಕೆಯಿಂದ. ಋಷಿಗಳ ಗುಡಿಸಿಲಲ್ಲೇ ರಾಷ್ಟ್ರಾಧ್ಯಕ್ಷರಿಗೂ ಅವರ ಪರಿವಾರಕ್ಕೂ ಸತ್ಕಾರ, ಆದರದ ಉಪಚಾರ. ಅಲ್ಲೇನು ಸಾಮಗ್ರಿಗಳ ಮೇಲಾಟವಿಲ್ಲ, ಸಿಬ್ಬಂದಿಯ ಪರದಾಟವಿಲ್ಲ,ಓರಣದ ಆಡಂಬರವಿಲ್ಲ; ಅದೂ ಮುರಿದು ಬಿದ್ದ ಆಶ್ರಮದಲ್ಲಿ. ಆದರೂ ರಾಜೇಂದ್ರಪ್ರಸಾದರಿಗೆ ಈ ಸಂದರ್ಶನ ಎಂದಿಗೂ ಮರೆಯಲಾಗದ ಅನುಭವವಾಯಿತು. ದೈವರಾತರು ಅವರ ಮುಂದೆ ಭಜನೆಮಾಡಿ ತೋರಿಸಿದರು ; ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿದರು; ಅವರ ಹೆಣ್ಣುಮಕ್ಕಳಿಂದ ವೇದಪಾಠ ಮಾಡಿಸಿದರು. ರಾಷ್ಟ್ರಾಧ್ಯಕ್ಷರು ಈ ಋಷಿಯ ಧೈರ್ಯ ಸ್ಥೈರ್ಯಗಳನ್ನು ಕಂಡು ಬೆರಗಾದರು.

ಆಶ್ರಮ ಸಮುದ್ರದ ನೀರಿನ ನೆರೆಯಲ್ಲೆ ಇದ್ದರೆ ನೆಮ್ಮದಿಯಿಲ್ಲವೆಂದು ದೈವರಾತರು ಬಗೆದು ಗೋಕರ್ಣದಿಂದ ಸುಮಾರು ದೂರದ ಒಳನಾಡಿನಲ್ಲಿ

ಗುಡ್ಡಗಳ ನಡುವೆ ಇನ್ನೊಂದು ಆಶ್ರಮವನ್ನು ಕಟ್ಟಿಕೊಂಡರು. ಆಗಾಗ ಗೋಕರ್ಣಕ್ಕೆ ಬಂದು ಹೋಗುತ್ತಿದ್ದರು. ಆದರೆ ಈ ಆಶ್ರಮದಲ್ಲಿ ಅವರು ಇರುತ್ತಿದ್ದುದು ಕಡಮೆಯೇ. ಏಕೆಂದರೆ ಆ ವೇಳೆಗಾಗಲೆ ಅವರಿಗೆ ಲೋಕ ಪ್ರಸಿದ್ಧಿ ಒದಗಿಬಂದಿದ್ದು ನಾಡಿನಲ್ಲೂ ಹೊರನಾಡುಗಳಲ್ಲೂ ಮೇಲಿಂದ ಮೇಲೆ ಕರೆಗಳು ಬರತೊಡಗಿದವು. ಆದರೂ ಈ ಆಶ್ರಮ ದಿಟವಾಗಿ ಅಶೋಕ ವನವೇ ಆಯಿತು.

ಲೋಕವಿಖ್ಯಾತಿ

ಬೆಂಕಿಯನ್ನು ಮುಚ್ಚಿಡುವ ಬೂದಿ ಯಾವುದು? ಈ ಋಷಿಯ ಮೇಲ್ಮೆಯನ್ನು ಸುಪ್ರಸಿದ್ಧರಾದ ಗಣಪತಿ ಮುನಿಗಳೆ ಲೋಕಕ್ಕೆ ಸಾರಿದ್ದರು. ರಮಣ ಮಹರ್ಷಿಗಳ ಶಿಷ್ಯರಿಗೂ ಭಕ್ತರಿಗೂ ದೈವರಾತರ ಹಿರಿಮೆಯ ಪರಿಚಯ ಆಗದಿರುವುದು ಹೇಗೆ? ಸಂತರ ನಡುವೆ ಸುವರ್ಣ ಸೇತುವೆಯಂತಿದ್ದ ಕಪಾಲಿ ಶಾಸ್ತ್ರಿಗಳಿಗೆ ದೈವರಾತರು 'ಗುರುಭಾಯಿ', ಸತೀರ್ಥರು. ಹೀಗಾಗಿ ಅವರ ಪ್ರಖ್ಯಾತಿ ಸುತ್ತಲೆಲ್ಲ ಪಸರಿಸಿತು. ಅರವಿಂದರ ಪ್ರಭಾವದೊಳಗೆ ಬಂದಿದ್ದ ರಂಗನಾಥ ದಿವಾಕರರ ಗಮನ ಇವರ ಕಡೆ ಹರಿಯಿತು. ದಿವಾಕರರು ದೇಶಭಕ್ತರು, ಸ್ವಾತಂತ್ರ್ಯಯೋಧರು, ಕೇಂದ್ರದ ಆಡಳಿತದಲ್ಲಿ ಪಾಲುಗೊಂಡಿದ್ದವರು, ಪ್ರಾಂತ್ಯಕ್ಕೆ ಅಧಿಪತಿಯಾಗಿದ್ದವರು; ಮಹಾತ್ಮಾ ಗಾಂಧಿಯವರ ಪಟ್ಟಶಿಷ್ಯರು. ಇಷ್ಟಾದರೂ ಅವರಿಗೆ ತಡೆಯಲಾರದ ಆಧ್ಯಾತ್ಮಿಕ ಹಂಬಲ. ಉಪನಿಷತ್ತುಗಳು, ರಾನಡೆ ದರ್ಶನ, ಅರವಿಂದರು ಮುಂತಾಗಿ ಹಲವಾರು ಕವಲುಗಳಲ್ಲಿ ಹರಿದಿದ್ದ ಹಂಬಲ ಅದು. ಅವರ ಹೃದಯದ ಹಂಬಲವನ್ನು ತುಂಬಿಸಿ ಅವರಿಗೆ ಸಮಾಧಾನವನ್ನು ತಂದವರು ದೈವರಾತರು. ಅವರಿಬ್ಬರ ನಡುವೆ ಸರಳವಾಗಿ ಗೆಳೆತನ ಮೊದಲಾಯಿತು. ದಿವಾಕರರು ಅವರನ್ನು ಗುರುಗಳೆಂದು ಬಗೆದರು.

ದಿವಾಕರರ ಉತ್ಸಾಹದಿಂದಾಗಿ ದೈವರಾತರು ರಾಷ್ಟ್ರಾಧ್ಯಕ್ಷರಾಗಿದ್ದ ರಾಜೇಂದ್ರಪ್ರಸಾದರಿಗೂ ಗುರುಗಳಾದರು. ಅಡಿಗಡಿಗೆ ದಿಲ್ಲಿಗೆ ಹೋಗಿ ರಾಷ್ಟ್ರಾಧ್ಯಕ್ಷರ ಒಳಮನೆಯಲ್ಲೇ (ರಾಷ್ಟ್ರಪತಿ ಭವನದಲ್ಲಿ) ತಿಂಗಳುಗಳು ತಂಗಲು ಕರೆ ಬರುತ್ತಿದ್ದಿತು. ನೇಪಾಳದ ಅರಸರು ಇವರನ್ನೊಮ್ಮೆ ಕಂಡಾಗಲೇ ಮನಸೋತರು. ನೇಪಾಳಕ್ಕೆ ಮತ್ತೆ ಮತ್ತೆ ಅವರನ್ನು ಕರೆಸಿಕೊಂಡು ಅರಮನೆಯಲ್ಲಿ ಉಳಿಸಿಕೊಳ್ಳುತ್ತಿದ್ದರು. ಅವರನ್ನು 'ರಾಜರ್ಷಿ'ಯೆಂದು ಕರೆದು ಸನ್ಮಾನಿಸಿದರು. ವಿದ್ವಾಂಸರ ಸಭೆಗಳಲ್ಲಿ ಭಾಗವಹಿಸುವಂತೆ ಅವರಿಗೆ ಕರೆ ಬರುತ್ತಿದ್ದಿತು. ಅಗ್ನಿಹೋತ್ರಂ ತಾತಾಚಾರ್ಯರ ಶತಾಭಿಷೇಕ ಸಂದರ್ಭ

ಜ್ಞಾನತೇಜಸ್ಸಿನಿಂದ ತುಂಬಿದ ದೈವರಾತರ ಲೋಕವಿಖ್ಯಾತಿ ತಡವಾಗಲಿಲ್ಲ

ದಲ್ಲಿ ಕುಂಭಕೋಣದಲ್ಲಿ ನೆರೆದ ಅಖಿಲಭಾರತ ವೈದಿಕ ಸಂಸ್ಕೃತಿ ಸಮ್ಮೇಳನ ದಲ್ಲಿ ಅವರು ಬಂದಾಗ ದೇಶದ ದಿಗ್ದಂತಿಗಳೆಲ್ಲ ಜಗ್ಗನೆದ್ದು ಮಹರ್ಷಿಗಳನ್ನು ಸನ್ಮಾನಿಸುವಂತೆ ಸನ್ಮಾನಿಸಿದರು. ಕಂಚಿ ಕಾಮಕೋಟಿ ಪೀಠದ ಶಂಕರಾ ಚಾರ್ಯರು ಮದ್ರಾಸಿನಲ್ಲಿ ನಡೆಸಿದ ಅಖಿಲಭಾರತ ವೇದ ಸಮ್ಮೇಳನದಲ್ಲೂ ಇವರು ಪಾಲ್ಗೊಂಡರು. ಮದ್ರಾಸಿನ ಸಂಸ್ಕೃತ ಕಾಲೇಜಿನಲ್ಲಿ ವೇದಭಾಷ್ಯ ವಿದ್ಯಾರ್ಥಿಗಳಿಗೆ ಅವರು ಮಾಡಿದ ಉಪದೇಶ ಪ್ರವಚನವನ್ನು ಪ್ರಾಚೀನ, ನವೀನ ವಿದ್ವಾಂಸರೆಲ್ಲ ಮೆಚ್ಚಿಕೊಂಡರು. ಕಾಶಿ ವಿದ್ಯಾಪೀಠದಲ್ಲಿಯೂ ಇವ ರಿಂದ ಪ್ರವಚನ ನಡೆದು ಇವರಿಗೆ ಸತ್ಕಾರ ಸಂದಿತು. ಕಾಶಿ ವಿಶ್ವವಿದ್ಯಾನಿಲ ಯದ ಕಡೆಯಿಂದ ಇವರಿಗೆ 'ವೇದವಾಚಸ್ಪತಿ' ಎಂಬ ಪುರಸ್ಕಾರವೂ ದೊರೆ ಯಿತು.

ಇವಲ್ಲದೆ, ಯಾಗ ಯಜ್ಞಗಳು ನಡೆಯುವಲ್ಲೆಲ್ಲ ಇವರಿಗೆ ಆಹ್ವಾನ ತಪ್ಪುತ್ತಿರಲಿಲ್ಲ. ಋಷಿಯಿಲ್ಲದ ಯಾಗ ಎಂಥದು ? ಪುಣೆಯಲ್ಲಿ ವಿಜೃಂಭಣೆ ಯಿಂದ ನಡೆದ ವಾಜಪೇಯ ಯಾಗದಲ್ಲಿಯೂ, ಮುಂದೆ ತಿರುಪತಿ ಮತ್ತು ಮಥುರೆಗಳಲ್ಲಿ ನಡೆದ ಯಜ್ಞಗಳಲ್ಲಿಯೂ ಇವರಿಗೆ ವಿಶೇಷವಾದ ಸತ್ಕಾರ ವಾಯಿತು. 1964ರಲ್ಲಿ ದೇಶದ ರಾಜಧಾನಿಯಾದ ದಿಲ್ಲಿಯಲ್ಲಿ ಅಖಿಲಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಳನ ಜರುಗಿತು; ದೇಶ ವಿದೇಶಗಳಿಂದೆಲ್ಲ ದೊಡ್ಡ ದೊಡ್ಡ ಪಂಡಿತರು ನೆರೆದಿದ್ದರು. ಅಲ್ಲಿ ಋಷಿ ದೈವರಾತರು ವೇದವನ್ನು ಕುರಿತು ಸಂಸ್ಕೃತದಲ್ಲಿ ಮಾಡಿದ ಪ್ರವಚನ ಎಲ್ಲರನ್ನೂ ಬೆರಗು ಮಾಡಿತು. ಆಗ ನಾಡಿನ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್‌ಶಾಸ್ತ್ರಿಯವರಿಂದ ಆ ತುಂಬಿದ ಸಭೆಯಲ್ಲಿ ಅವರಿಗೆ 'ವಿದ್ಯಾವಾಚಸ್ಪತಿ' ಎಂಬ ಪ್ರಶಸ್ತಿಯನ್ನು ನೀಡ ಲಾಯಿತು.

ಇಷ್ಟೆಲ್ಲ ಖ್ಯಾತಿ ಬರುವ ಮೊದಲೆ ಲೋಕಪ್ರಸಿದ್ಧ ಸಂತ ಮಹೇಶ ಯೋಗಿಯವರು ಇವರ ಪ್ರತಿಭೆಯನ್ನು ಗುರುತಿಸಿದ್ದರು. ಮಹೇಶಯೋಗಿ ಗಳಿಗೆ ವೇದವೆಂದರೆ ಇನ್ನಿಲ್ಲದ ಆದರ; ವೇದದ ಮೇಲ್ಮೆಯನ್ನು ಲೋಕದಲ್ಲೆಲ್ಲ ಸಿದ್ಧಪಡಿಸಬೇಕೆಂಬ ಕಾತರ ಅವರದ್ದು. ಇದಕ್ಕೆಂದು ವಿದೇಶಗಳಲ್ಲೆಲ್ಲ ತಮ್ಮ ಸಂಸ್ಥೆಗಳನ್ನು ಕಟ್ಟಿಕೊಂಡು ಹೆಣಗಾಡುತ್ತಿದ್ದಾರೆ. ಅಂಥವರು ಮಂತ್ರದ್ರಷ್ಟಾ ರನಾದ ಋಷಿಯೇ ಮುಂದಿರುವಾಗ ಅವಕಾಶವನ್ನು ಬಿಡುತ್ತಾರೆಯೆ ? ಈಗ್ಗೆ ಮೂವತ್ತು ನಲವತ್ತು ವರ್ಷಗಳ ಹಿಂದೆಯೆ ಅವರು ದೈವರಾತರನ್ನು



ಪ್ರಧಾನಿ ಲಾಲ್‌ಬಹಾದ್ದೂರರ ಸಮ್ಮುಖದಲ್ಲಿ 'ವಿದ್ಯಾವಾಚಸ್ಪತಿ' ಪ್ರಶಸ್ತಿ ನೀಡಲಾಯಿತು

ವಿದೇಶಗಳಿಗೆ ಕರೆಸಿಕೊಂಡಿದ್ದರು. ಇಟಲಿ, ಅಮೆರಿಕ, ಸ್ಪೇನ್ ಮತ್ತು ಫ್ರಾನ್ಸ್ ದೇಶಗಳಲ್ಲಿ ದೈವರಾತರು ವೇದವನ್ನು ಕುರಿತು ಮಾಡಿದ ಪ್ರವಚನಗಳು ಮಹೇಶಯೋಗಿಯವರ ಕ್ರಾಂತಧ್ಯಾನ ಯೋಗದ ಪ್ರಚಾರಕ್ಕೆ ತುಂಬ ನೆರವಾದುವು. ವೇದವಿದ್ಯೆ ಅತ್ಯಂತ ಪ್ರಾಚೀನವಾದರೂ ಅದರಲ್ಲಿ ಅತ್ಯಾಧುನಿಕ ಮೌಲ್ಯಗಳು ಹುದುಗಿವೆಯೆಂಬುದನ್ನು ಪರಿಣತರು ಅರಿಯುವಂತಾಯಿತು.

ಅವರ ಪ್ರತಿಭೆಗೆ, ಸಿದ್ಧಿಗೆ, ವ್ಯಕ್ತಿತ್ವದ ಸ್ವಾರಸ್ಯಕ್ಕೆ ಮಾರುಹೋದ ಮಹನೀಯರು ಅನೇಕರು. ಅವರಲ್ಲಿ ರಾಜೇಂದ್ರಪ್ರಸಾದರು, ದಿವಾಕರರು, ಮಹೇಶಯೋಗಿಗಳ ಪ್ರಸ್ತಾಪ ಆಗಲೇ ಬಂದಿದೆ. ಉಳಿದವರಲ್ಲಿ ರಾಷ್ಟ್ರಪತಿಗಳಾಗಿದ್ದ ಇನ್ನೊಬ್ಬರು ಡಾ. ಸರ್ವೇಪಲ್ಲಿ ರಾಧಾಕೃಷ್ಣನ್, ದೇಶನಾಯಕರಲ್ಲಿ ಅಗ್ರಗಣ್ಯರಾಗಿದ್ದ ಪಂಡಿತ ಮದನ ಮೋಹನ ಮಾಳವೀಯರು. ಈಗ ಸರ್ವೋದಯ ನಾಯಕರಾಗಿರುವ ಆಚಾರ್ಯ ವಿನೋಬಾ ಭಾವೆಯವರು, ವಿದರ್ಭದ ಕೇಸರಿಯೆಂದು ಜನಪ್ರಿಯರಾಗಿದ್ದ ಮತ್ತು ವೈದಿಕ ಸಂಶೋಧನ ಮಂಡಲದ ಅಧ್ಯಕ್ಷರಾಗಿದ್ದ ಮಾಧವ ಶ್ರೀಹರಿ ಆಣೆ, ವಿದ್ಯಾಪ್ರಪಂಚದಲ್ಲಿ ವರಿಷ್ಠರಾಗಿದ್ದ ಮಹಾಮಹೋಪಾಧ್ಯಾಯ ದತ್ತೋ ವಾಮನ ಪೋದ್ದಾರರು, ಪುರಿ ಶಂಕರಾಚಾರ್ಯರು, ಕನ್ನಡ ಕುಲಪುರೋಹಿತರೆಂದು ಹೆಸರಾಗಿದ್ದ ಆಲೂರು ವೆಂಕಟರಾಯರು, ರಾಜಕಾರಣಿಗಳಲ್ಲಿ ಹಿರಿಯರಾಗಿದ್ದ ಶ್ರೀ ಪ್ರಕಾಶರು, ಪಂಡಿತ ಪ್ರಕಾಂಡರಾದ ಡಾ. ವಿ. ರಾಘವನ್ ಇವರನ್ನೂ ಹೆಸರಿಸಬಹುದು. ಪಂಡಿತರು ಮೆಚ್ಚಿಕೊಳ್ಳುವುದೇನೋ ಸರಿ; ಸಾಮಾನ್ಯರು ಕೂಡ ಅವರನ್ನು ಗೌರವಿಸುತ್ತಿದ್ದರೆಂದರೆ ಅವರ ಹಿರಿಮೆಯ ಇನ್ನೊಂದು ಮುಖ ಕಾಣಿಸುತ್ತದೆ.

ವ್ಯಕ್ತಿ ಪರಿಚಯ

ಇದು ಅವರ ವ್ಯಕ್ತಿತ್ವದ ಮಾತು. ಅವರದ್ದು ತುಂಬ ಸ್ವಾರಸ್ಯವಾದ ಮನೋಧರ್ಮ, ಋಷಿಯೇ ಆಗಿದ್ದರೂ ಶಿಶುವೂ ಆಗಿ ಉಳಿದಿದ್ದರು. ಆಧ್ಯಾತ್ಮಿಕ ಸಿದ್ಧಿಯಿಂದ ಎಷ್ಟು ಎತ್ತರ ಬೆಳೆದರೋ, ಪ್ರಾಪಂಚಿಕ ಪ್ರಸಿದ್ಧಿಯಿಂದ ಎಷ್ಟು ವಿಶಾಲವಾಗಿ ಹರಡಿಕೊಂಡರೋ, ನಿತ್ಯಜೀವನದಲ್ಲಿ ಅಷ್ಟೇ ನಮ್ರರಾಗಿ ನಡೆದುಕೊಂಡರು, ತಮ್ಮ ಸಿದ್ಧಿಯ ಅಥವಾ ಪ್ರಸಿದ್ಧಿಯ ಅರಿವೇ ಇರಲಿಲ್ಲವೆಂಬಂತೆ, ಅಥವಾ ಈ ಲಾಭಗಳ ವಿಚಾರವಾಗಿ ತೀರ ಉದಾಸೀನರಾಗಿದ್ದಂತೆ. ರಾಷ್ಟ್ರಪತಿಗಳ ಶಿಷ್ಯವೃತ್ತಿಯಾಗಲಿ, ವಿದೇಶಗಳ ಸನ್ಮಾನವಾಗಲಿ, ತಮ್ಮ ಗುರುಗಳಿಂದಲೆ ದೊರೆತ ಗೌರವವಾಗಲಿ ಅವರಲ್ಲಿ ಯಾವ ಬಗೆಯ ದಂಭವನ್ನೂ ಮೂಡಿಸಲಿಲ್ಲ. ಎಳೆತನದಿಂದ ಬೆಳೆದುಬಂದಿದ್ದ ವಿನಯ ಕಡೆತನಕ ಉಳಿಯಿತು.

ಲೌಕಿಕವಾದ ಲಾಭ ಅವರಿಗೆ ಎಂದೂ ಸೇರದ ಮಾತು. ತಮ್ಮ ಗುರುಕುಲ ಪ್ರಯೋಗವಾಗಲಿ, ಆಶ್ರಮ ವ್ಯವಸ್ಥೆಯಾಗಲಿ, ಕಡೆಗೆ ಕುಟುಂಬದ ನೆಮ್ಮದಿಯಾಗಲಿ ತಾವು ಸ್ವಲ್ಪ ಬಯಸಿ ತಮ್ಮ ಪ್ರಭಾವವನ್ನು ಉಪಯೋಗಿಸಿಕೊಂಡಿದ್ದರೆ ಅವೆಲ್ಲವೂ ಕೈಗೂಡುತ್ತಿದ್ದುವು. ರಾಷ್ಟ್ರಪತಿಗಳೆ ಇವರು ಕರೆದಾಗ ಇವರಿದ್ದಲ್ಲಿಗೆ ಬರುತ್ತಿದ್ದರೆಂದಮೇಲೆ ಕೇಳುವುದೇನು ? ಒಮ್ಮೆ ಅವರು ರಾಷ್ಟ್ರಪತಿಯ ಅತಿಥಿಯಾಗಿ ಅವರೊಂದಿಗೆ ದಿಲ್ಲಿಯಲ್ಲಿ ತಂಗಿದ್ದಾಗ ಅವರಿಗೊಂದು ಸುದ್ದಿ ಬಂದಿತು – ಗೋಕರ್ಣದಲ್ಲಿ ತಮ್ಮ ಆಶ್ರಮದೆದುರಿಗಿದ್ದ ಅಶ್ವತ್ಥಕಟ್ಟೆಯನ್ನು ಕೀಳಿಸುವ ಹವಣಿಕೆಯಲ್ಲಿ ಆ ಭೂಮಿಯ ಒಡೆಯ ಇದ್ದಾನೆಂದು. ದೈವರಾತರು ಆ ಯಜಮಾನನಿಗೆ ಮರವನ್ನು ಹಾಗೆ ಕೀಳಿಸಬಾರದೆಂದು ಬೇಡಿಕೊಂಡು ಪತ್ರ ಬರೆದರು. ರಾಷ್ಟ್ರಪತಿಯ ಕೆಳದರ್ಜೆಯ ಕಾರಕೂನನಿಗೆ ಅವರು ಒಂದು ಮಾತು ಹೇಳಿದ್ದರೂ ಸಾಕಾಗಿತ್ತು, ಗೋಕರ್ಣದ ಜಮೀನುದಾರನ ಕೈ ಕಟ್ಟುತ್ತಿತ್ತು. ಆದರೂ ಅವರು ಬರೆದದ್ದು ಬೇಡಿಕೆಯ ಪತ್ರವನ್ನೇ ! ಇದು ಅವರ ಸ್ವಭಾವವನ್ನು ಸ್ಪಷ್ಟಪಡಿಸುತ್ತದೆ.

ತಮ್ಮ ಸಲುವಾಗಿ ಇತರರ ಅಧಿಕಾರವನ್ನು ಎಷ್ಟು ಮಾತ್ರಕ್ಕೂ ಅವರು ಬಳಸಿಕೊಳ್ಳಲಿಲ್ಲ. ಎಷ್ಟೇ ಪ್ರಭಾವ ತಮ್ಮ ಹಿಡಿಯೊಳಗೇ ಇದ್ದರೂ ಸರಳತನ ಮಾತ್ರ ಬಿಡಲಿಲ್ಲ. ಮಗುವಿನಷ್ಟು ಸರಳ ಈ ಋಷಿ.

ವ್ಯವಹಾರದಲ್ಲಿ ಅವರು ನಿಃಸ್ಪೃರು, ಎಂದರೆ ಅಭ್ಯುದಯದ ಕಡೆಗೆ ಲಕ್ಷ್ಯವಿಲ್ಲ. ಹಣವೆಂದರೆ ಕೂಡಿಹಾಕಬೇಕಾದ ವಸ್ತುವಲ್ಲ, ಹರಡಿ ಹಂಚ ಬೇಕಾದುದು ಎಂದೇ ಅವರ ನಿರ್ಧಾರ. ತಮ್ಮ ಸಂಸ್ಥೆಗಳ ಸಲುವಾಗಿ ಸಾವಿರಾರು, ಲಕ್ಷಾಂತರ ರೂಪಾಯಿಗಳು ಬಂದುವು; ಬಂದದ್ದು ಏನೂ ಉಳಿಯಲಿಲ್ಲ ; ಸಂಸ್ಥೆಗಳೂ ಬೆಳೆಯಲಿಲ್ಲ. ಕೇಳಿದವರಿಗೆ ಕೇಳಿದಷ್ಟು ಕೊಟ್ಟಲ್ಲದೆ ಅವರಿಗೆ ಸಮಾಧಾನವಿರದು; ಸಣ್ಣ ಪುಟ್ಟ ಕೆಲಸ ಮಾಡಿಸಿಕೊಂಡರೂ ಹೆಚ್ಚು ಹಣವನ್ನೇ ನೀಡುತ್ತಿದ್ದರು. ತಮ್ಮ ಕೈ ಬರಿದಾದರೆ ಚಿಂತೆಯಿಲ್ಲ; ಇನ್ನು ಕೊಡಲಾಗುವುದಿಲ್ಲ ಅಷ್ಟೆ! ಅದರಲ್ಲೂ ಉದಾಸೀನರೇ. ಇದ್ದರೆ ಕೊಟ್ಟರಾಯಿತು, ಇಲ್ಲದಿದ್ದರೆ ಬಿಟ್ಟರಾಯಿತು. ಅಷ್ಟೇ ಅವರ ವ್ಯವಹಾರ ಕುಶಲತೆ. ಬಂದ ಕಾಸಿಗಾಗಲಿ ಹೋದ ಹಣಕ್ಕಾಗಲಿ ಅವರೆಂದೂ ಲೆಕ್ಕವಿಟ್ಟವರಲ್ಲ. ಬಂದಿತೆಂಬ ಸಂತೋಷವಾಗಲಿ ಹೋಯಿತೆಂಬ ದುಃಖವಾಗಲಿ ಅವರನ್ನೆಂದೂ ಸೋಂಕಲಿಲ್ಲ.

ಹೀಗೆಂದ ಮಾತ್ರಕ್ಕೆ ಅವರು ಅಲಸಿಗರೆಂದಲ್ಲ. ಅವರು ಕೆಲಸಮಾಡದೆ ಸೋಮಾರಿಯಾಗಿದ್ದ ದಿನವೇ ಇಲ್ಲ. ಬೇಸಾಯವೆಂದರೆ ಅವರಿಗೆ ಪ್ರೀತಿ; ಗದ್ದೆಗೆ ಹೋಗಿ ತಾವೇ ದುಡಿಯುತ್ತಿದ್ದರು. ಯಾವ ಕೆಲಸವನ್ನಾಗಲಿ ಅವರು ಕೀಳೆಂದು ಕಂಡದ್ದೇ ಇಲ್ಲ. ಓದಿನಲ್ಲಿ ಆಸಕ್ತಿ ಬರುಬರುತ್ತ ಬೆಳೆಯಿತು; ಅದೂ ಛಂದೋದರ್ಶನವಾದ ಮೇಲೆ ಬೇರೂರಿತು. ವಿದ್ಯಾರ್ಥಿಯಂತೆ ಆಸೆಯಿಂದ ಓದುತ್ತಿದ್ದರು. ಬಂದವರಿಗೆ ಬೇಸರಪಡದೆ ಕಲಿಸುತ್ತಿದ್ದರು. ಕಡೆಕಡೆಗೆ ಸಂಸ್ಕೃತದಲ್ಲಿ ಪುಸ್ತಕಗಳನ್ನು ಬರೆಯತೊಡಗಿದರು. ಅವರು ಬರೆದು ಸಿದ್ಧಪಡಿಸಿದ 'ವೇದಾರ್ಥಕಲ್ಪಲತಾ' ಎಂಬ ಗ್ರಂಥದಲ್ಲಿ ಒಂದು ಸಾವಿರದ ಅರವತ್ತುನಾಲ್ಕು ಶ್ಲೋಕಗಳಿವೆ! ಬೇರೆ ಬೇರೆ ಮಂತ್ರಗಳನ್ನು ನಯವಾಗಿ ಒಳಗಣ್ಣಿನಿಂದ ಅರ್ಥ ಬಿಡಿಸಿ ವಿವರಿಸಿದ್ದಾರೆ. ಹೀಗೆ ಅವರಿಂದ ಬರೆಯಲ್ಪಟ್ಟ ಪುಸ್ತಕಗಳು ಹಲವಿವೆ. ಅವುಗಳಲ್ಲಿ ಕೆಲವಾದರೂ ಅಚ್ಚುಮನೆಯನ್ನು ಕಾಣುವ ಯೋಗವನ್ನು ಪಡೆಯಬೇಕು.

ಅವರಿಗೆ ಸಂಸ್ಕೃತದಲ್ಲಿ ಪ್ರಬಂಧಗಳನ್ನು ಬರೆಯುವುದು, ಕಾವ್ಯಗಳನ್ನು

ರಚಿಸುವುದು, ಮಾತನಾಡುವುದು ತುಂಬ ಸರಾಗವಾದ ಸಿದ್ಧಿ. ಸಂಸ್ಕೃತವಲ್ಲದೆ, ತಾಯಿನುಡಿಯಾದ ಕನ್ನಡದಲ್ಲಿ ಅವರ ಮಾತು ಚೆಲುವಾದುದು, ಬಿಗಿಯಾದುದು. ಹಾಗೆಯೇ ಮರಾಠಿಯಲ್ಲೂ ಹಿಂದಿಯಲ್ಲೂ ಒಳ್ಳೆಯ ವಾಗ್ಮಿತೆ. ನೇಪಾಳಿಯನ್ನೂ ಅವರು ಕಲಿತಿದ್ದರು. ನೇಪಾಳಿ ಭಾಷೆಯಲ್ಲಿಯೆ 'ಪಶುಪತಿ ಹೃದಯ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಗುಜರಾತಿಯೂ ಅವರಿಗೇನು ಹೊಸಭಾಷೆಯಲ್ಲ. ಮತ್ತೆ ತಮಿಳು ನೀರು ಕುಡಿದಂತೆ. ಅದು ಅವರ ಗುರುಗಳ ಮನೆಮಾತು, ಅವರು ತಪಶ್ಚರ್ಯೆಗಾಗಿ ನಿಂತ ಮತ್ತು ತೀರ್ಥಯಾತ್ರೆಗಾಗಿ ಅಲೆದಾಡಿದ ಪ್ರಾಂತ್ಯದ ಮಾತು; ಮೇಲಾಗಿ ಚಿಕ್ಕ ವಯಸ್ಸಿನಲ್ಲೆ ಬಳಕೆಗೆ ಬಂದ ಭಾಷೆ. ತೆಲುಗೂ ಸುಮಾರಾಗಿ ಅವರ ಹಿಡಿತಕ್ಕೆ ಬಂದಿದ್ದಿತು. ಇಂಗ್ಲಿಷ್ ಭಾಷೆ ಮಟ್ಟಿಗೆ ಅವರ ವಶವಾಗದೆ, ಕೊಂಚ ತಕರಾರು ಮಾಡಿತು; ಅವರ ವಿದೇಶ ಪ್ರವಾಸದ ಸಂದರ್ಭದಲ್ಲಿ ಇದರಿಂದ ತೊಂದರೆಯೂ ಆಯಿತು.

ಈ ರೀತಿಯ ವಾಗ್ವಿಲಾಸವಷ್ಟೇ ಅವರ ಹಿರಿಮೆಯಲ್ಲ. ಚಿತ್ರ ಬಿಡಿಸುವುದೂ ಅವರಿಗೆ ಒಗ್ಗಿ ಬಂದ ವಿದ್ಯೆ. ವೇದಮಂತ್ರಗಳನ್ನು ನೋಡಿದ ಋಷಿಯಲ್ಲವೆ ಅವರು ? ಬರೆಯ ಮಾತಿನಿಂದ ಅದನ್ನು ಒಕ್ಕಣಿಸಿದುದು ಒಂದು ಸಾಧನೆಯಾದರೆ, ಒಂದೊಂದು ಮಂತ್ರಕ್ಕೂ ಸಾಂಕೇತಿಕವಾದ ರೇಖಾಚಿತ್ರಗಳನ್ನೂ ವರ್ಣಚಿತ್ರಗಳನ್ನೂ ಮೂಡಿಸಿದುದು ಇನ್ನೊಂದು. ಭಜನೆಯ ಗೀಳು ಅವರಿಗೆ ಎಳೆತನದಲ್ಲಿಯೆ ಅಂಟಿಕೊಂಡಿತಾಗಿ, ಸಂಗೀತದ ಬಗ್ಗೆ ಅವರ ಪರಿಚಯ ಬೇರೂರಲು ಬೇರಾವ ಕಾರಣವೂ ಬೇಕಾಗಲಿಲ್ಲ. ಭಜನೆಗೆ ತಕ್ಕಂತೆ ಕುಣಿಯುವುದೂ ಅವರಿಗೆ ತಾನಾಗಿ ಬಂದ ಸಿದ್ಧಿ. ಹಾಡಿದಾಗ, ಮೊದಲೇ ಕಂಚಿನ ಕಂಠ, ಮೇಲಾಗಿ ವೇದಪಾಠದಿಂದ ಸುಶಿಕ್ಷಿತವಾದ ಶಾರೀರ. ಕುಣಿಯುವಾಗ ಭಾವಾವೇಶ, ತನ್ಮಯತೆ, ಎದುರಿಗಿದ್ದವರು ಬೆರಗಾಗಿ ಮೈಮರೆಯುವಂತೆ ಮಾಡುವರು. ಈ ತವಕ ಅವರ ಮುಪ್ಪಿನಲ್ಲೂ ಮರೆಯಾಗಲಿಲ್ಲ.

ಗೋಕರ್ಣಕ್ಷೇತ್ರದಲ್ಲಿ ಪ್ರತಿವರ್ಷ ದೀಪಾವಳಿಯಂದು ಮಹಾಬಲೇಶ್ವರನ ಗುಡಿಯಿಂದ ಉತ್ಸವ ಹೊರಟು ತನ್ನ ಸಂಚಾರದಲ್ಲಿ ದೈವರಾತರ ಆಶ್ರಮದವರೆಗೂ ಹೋಗುವುದು ವಾಡಿಕೆ. ಆಶ್ರಮದಲ್ಲಿ ಆಗ ಅಷ್ಟಾವಧಾನ ಸೇವೆಯೂ ನಡೆಯುವ ವಾಡಿಕೆ. ದೈವರಾತರು ಆ ಸಂದರ್ಭದಲ್ಲಿ ಆಶ್ರಮ

ದಲ್ಲಿದ್ದಾಗ ದೇವರ ಮುಂದೆ ಹಾಡುವುದೂ ಕುಣಿಯುವುದೂ, ಭಾವದ ನೆರೆ ಮೈಮೇಲೆ ಅಡರಿ ಅವರನ್ನು ಸಮಾಧಿಯಲ್ಲಿ ಇಳಿಸುವುದೂ ಅಲ್ಲಿದ್ದವರು ಯಾರೂ ಎಂದೂ ಮರೆಯಲಾಗದ ಅನುಭವಗಳು. ದೈವರಾತರ ಭಕ್ತಿ ಭಾವದ ನೆಲೆಯನ್ನು ಅವರ 'ರಾಮರಸಾಯನ' ಎಂಬ ಗ್ರಂಥದಲ್ಲಿ ಕಾಣ ಬಹುದು.

ಮನೆಗೆಲಸವಾಗಲಿ, ಗದ್ದೆಯ ದುಡಿಮೆಯಾಗಲಿ, ಶಾಲೆಯ ಕಲಿಕೆ ಯಾಗಲಿ ದೈವರಾತರ ಅಚ್ಚುಕಟ್ಟು, ಓರಣ, ಒಪ್ಪ ಎದ್ದುನಿಲ್ಲುವ ವಿವರ ಗಳು. ಮಾಡುವ ಕೆಲಸದಲ್ಲಿ ಕಲೆಗಾರಿಕೆ ಇರಬೇಕೆಂದು ಅವರ ಹಟ. ಭಕ್ತ ರಾಗಿ ಮೈಮರೆತರೂ, ವ್ಯವಹಾರದಲ್ಲಿ ದಡ್ಡರಾದರೂ, ಪ್ರವೃತ್ತಿಯಲ್ಲಿ ಪರಿ ವ್ರಾಜಕರಾದರೂ ಹಿಡಿದ ಕೆಲಸದಲ್ಲಿ ಅವರು ತೋರಿಸುತ್ತಿದ್ದ ನಿಷ್ಠೆ ಅಸಾ ಧಾರಣವಾದುದು. ಪ್ರಯೋಜನಕ್ಕೆಂದು ಕೆಲಸವಲ್ಲ, ಕೆಲಸಕ್ಕಾಗಿ ಕೆಲಸ ಎನ್ನು ವುದು ಅವರ ವಾದ. ನಿದರ್ಶನಕ್ಕೆ, ಅವರು ತಮ್ಮ ಕಡೆಗಾಲದಲ್ಲಿ ಬರೆಯ ಲೆಂದು ಆರಿಸಿಕೊಂಡ ವಿಷಯ 'ಅವಶಿಷ್ಟ ವಿಶಿಷ್ಟ ವಾಙ್ನಾಮಧೇಯಾನಿ' ಎಂಬುದು ವೇದಮಂತ್ರಗಳಿಗೆ ಹಲವಾರು ಭಾಷ್ಯಗಳೂ ವ್ಯಾಖ್ಯಾನಗಳೂ ಇವೆಯಷ್ಟೆ. ಎಲ್ಲರೂ ಎಲ್ಲ ಮಂತ್ರಗಳಲ್ಲಿ ಬರುವ ಎಲ್ಲ ಹೆಸರುಗಳನ್ನೂ ವಿವರಿಸಿಲ್ಲ; ಎಲ್ಲ ಸಂದರ್ಭಗಳನ್ನೂ ಎಲ್ಲ ಅರ್ಥಗಳನ್ನೂ ಕಾಣಿಸಿಲ್ಲ. ದೈವ ರಾತರು ಹೀಗೆ ಬಿಟ್ಟುಹೋದ ನಾಮಧೇಯಗಳನ್ನೇ ಹುಡುಕಿ, ತೆಗೆದು, ಪಟ್ಟಿ ಮಾಡಿ, ಸಂದರ್ಭಗಳನ್ನು ಸೂಚಿಸಿ, ಅರ್ಥಗಳನ್ನು ಮಾಡುವ ಕೆಲಸದಲ್ಲಿ ತೊಡಗಿದ್ದರು. ಅತ್ಯಂತ ಶ್ರಮವಹಿಸಿ, ಹಗಲಿರುಳು ದುಡಿದು ಸಿದ್ಧಪಡಿಸು ತ್ತಿದ್ದ ಈ ಗ್ರಂಥವನ್ನು ಕುರಿತು "ಇದು ಮುದ್ರಣವಾಗಲೆಂದಲ್ಲ; ಇದು ನಡೆಯಬೇಕಾಗಿದ್ದ ಕೆಲಸ ಎಂದಷ್ಟೆ!" ಎನ್ನುತ್ತಿದ್ದರು.

'ಕೆಲಸಕ್ಕಾಗಿ ಕೆಲಸ ಮಾತ್ರ. ಮಾಡುವ ಕೆಲಸದಲ್ಲಿ ಕಲೆಗಾರಿಕೆ ಇರಬೇಕು' –
ನುಡಿದಂತೆ ನಡೆದ ಕರ್ಮಯೋಗಿ

ಋಷಿಗೆ ನಮನ

ದೈವರಾತರು ಇದ್ದುದೂ ಹೋದುದೂ ಋಷಿಯಂತೆಯೆ. ಅವರ ಬಾಳು ಎಷ್ಟು ಸರಳವೋ, ಅವರ ಉಡುಗೆ ಅಷ್ಟೇ ಮಿತ. ಬಹುವೇಳೆ ಕೌಪೀನ, ಮೇಲೊಂದು ಕಂಕುಳ ಕೆಳಗೆ ಹೊದ್ದ ಧೋತರ, ಇಷ್ಟೇ. ಹೊರಗೆ ಹೋದರೆಂದರೆ ಬಗಲಲ್ಲಿ ಒಂದು ದೊಡ್ಡ ಜೋಳಿಗೆ. ಅವರ ಸಂಪತ್ತೆಲ್ಲ ಆ ಜೋಳಿಗೆಯಲ್ಲೇ! ಬರಿಗಾಲು, ತೆರೆದ ಬಲಭುಜ. ಮೊದಲಿಗೆ ಕೈಯಲ್ಲೊಂದು ಕಮಂಡಲು ಇರುತ್ತಿದ್ದಿತಂತೆ. ಇದರಿಂದ ಊರಿನ ಜನರ ಪಾಲಿಗೆ ಅವರು 'ಗೆರಟೆಭಟ್ಟ'ರಾಗಿದ್ದರು. ಈಚೆಗೆ ಕಮಂಡಲು ಇರುತ್ತಿರಲಿಲ್ಲ. ನೀಳವಾದ ಗಡ್ಡ, ಕೆದರಿದ ತಲೆಗೂದಲು. ಆದರೆ ಅವರ ಕಣ್ಣುಗಳಲ್ಲಿದ್ದ ಹೊಳಪು ಎಂಥವರನ್ನಾದರೂ ಸೆಳೆಯುವಂಥದು. ಅವರು ಎಲ್ಲಿದ್ದರೆ ಅಲ್ಲಿ ವೈದಿಕ ವಾತಾವರಣವೇ. ನೋಡಿದೊಡನೆ ಅವರ ಅಲೌಕಿಕ ವರ್ಚಸ್ಸು ಎದ್ದು ನಿಲ್ಲುತ್ತಿತ್ತು.

ಅವರು ಛಂದೋದ್ದರ್ಶನವಾದ ಮೇಲೆ ಗೃಹಸ್ಥರಾದರೆಂದು ಹೇಳಿದೆವಲ್ಲ. ಹೆಂಡತಿ ಶ್ರದ್ಧಾದೇವಿ. ಮನೆತನವೇ ವೈದಿಕ ಮನೆತನ, ಇವರ ಕಾಲಕ್ಕೆ ಈ ವೈದಿಕ ಶ್ರದ್ಧೆ ಇನ್ನಷ್ಟು ಬೇರೂರಿತು. ಇಬ್ಬರು ಹೆಣ್ಣುಮಕ್ಕಳ ಹೆಸರು ಮೇಧಾ ಮತ್ತು ಶಚೀ; ಗಂಡುಮಕ್ಕಳು ವೇದಶ್ರವಸ್, ಸತ್ಯಶ್ರವಸ್ ಸೋಮಶ್ರವಸ್. ಎಂದರೆ, ಎಲ್ಲ ವೇದದ ಹೆಸರುಗಳೇ. ಗೌರೀಶ ಕಾಯ್ಕಿಣಿಯವರೆನ್ನುವಂತೆ "ಆ ಕುಟುಂಬವೇ ಋಷಿಕುಲ", ತಮ್ಮ ಮಕ್ಕಳಿಗೆಲ್ಲ ವೇದ ಕಲಿಸಿದ್ದರು. ಹೆಣ್ಣುಮಕ್ಕಳು ವೇದ ಓದಬಾರದೆಂಬ ವಾದವನ್ನು ಅವರು ಅಲ್ಲಗಳೆದು ವೈದಿಕಪರಂಪರೆಯಲ್ಲಿ ಇದಕ್ಕೆ ಏನೇನೂ ಆಧಾರವಿರದು ಎಂದು ತೋರಿಸಿದ್ದಾರೆ. ಅವರ ಹೆಣ್ಣುಮಕ್ಕಳಿಂದ ರಾಷ್ಟ್ರಪತಿಗಳೆದುರು ವೇದಪಾಠ ಮಾಡಿಸಿದ್ದರು. ಹೆಂಗಸರಿಗೂ ವೇದಾಧಿಕಾರವುಂಟು ಎಂದು ತಮ್ಮ ಋಷಿವಾಣಿಯಿಂದ ಸಿದ್ಧಪಡಿಸಿದ್ದಾರೆ.

ದೈವರಾತರು ಸಂಪ್ರದಾಯಶೀಲ ವೈದಿಕ ವಿದ್ವಾಂಸರಾದರೂ ಅತಿ

ಯಾದ ಮತ್ತು ಅರ್ಥವಿಲ್ಲದ ಮಡಿಯೆಂದರೆ ಸಹಿಸರು. ಅವರ ಮನೋವೃತ್ತಿ ಉದಾರವಾದುದು; ತಮ್ಮ ಇರಸರಿಕೆಯಲ್ಲಾಗಲಿ ನಡೆವಳಿಕೆಯಲ್ಲಾಗಲಿ ತೀರ ಸರಳರಾದುದರಿಂದ ಯಾವ ಬಗೆಯ ಕಟಪಟೆಯನ್ನೂ ಕಾಣರಿಯರು. ಯಾವುದನ್ನೂ ಹೀನಾಯವಾಗಿ ಕಾಣರು; ಯಾರನ್ನೂ ದೂರವಿರಿಸರು; ಯಾವುದಕ್ಕೂ ಬೇಸರಗೊಳ್ಳರು. ಋಷಿಯಾದರೂ ಶಿಶುವೇ. ಅವರು ಗೊಡ್ಡು ಸಂಪ್ರದಾಯಕ್ಕೆ ಅಂಟಿಕೊಂಡಿದ್ದವರಲ್ಲ ಎಂದು ತೋರಿಸಲು ಅವರ ನಿಲುವುಗಳಲ್ಲಿ ಎರಡನ್ನು ಸೂಚಿಸಿದರೆ ಸಾಕು. ಈಗ ಸಾಮಾನ್ಯವಾಗಿ ಎಲ್ಲರೂ ವೇದದಲ್ಲಿ ಓಂಕಾರಕ್ಕೆ ಹಿರಿಯ ಪಟ್ಟವೆಂದು ಭಾವಿಸಿದ್ದಾರಷ್ಟೆ. ದೈವರಾತರ ಪ್ರಕಾರ ಇದು ತಪ್ಪುಗ್ರಹಿಕೆ. ವೇದದಲ್ಲಿ ಮೊದಲಾಗಿ ಎದ್ದು ನಿಲ್ಲುವುದು 'ಈಂಕಾರ'. ಅವರು ಸಿದ್ಧಪಡಿಸಿದ ಮಂತ್ರ "ಈಂ ಓಂ ಶ್ರೀಃ" ಎನ್ನುವುದು. ಇನ್ನೊಂದು, ಋಗ್ವೇದ ಮೊದಲಾಗುವ ಮಂತ್ರ ಯಾವುದೆಂಬ ವಿಚಾರವನ್ನು ಕುರಿತು. ಸಂಪ್ರದಾಯದ ಪ್ರಕಾರ ಅದು "ಅಗ್ನಿಮೀಳೇ ಪುರೋಹಿತಂ" ಎನ್ನುವುದು; ಅಗ್ನಿಪರವಾದುದು. ಆದರೆ ದೈವರಾತರು ಹೀಗಲ್ಲವೆನ್ನುತ್ತಾರೆ. ಅವರ ಪ್ರಕಾರ ಸೂರ್ಯಪರವಾದ ಗಾಯತ್ರೀ ಮಂತ್ರದಿಂದಲೆ ಋಗ್ವೇದ ಆರಂಭವಾಗುತ್ತದೆ. ಗಾಯತ್ರಿಯ ಸ್ವಾರಸ್ಯವನ್ನು ವಿವರಿಸಿ 'ಗಾಯತ್ರೀಸುಧಾ' ಎಂಬ ಸಂಸ್ಕೃತ ಗ್ರಂಥವೊಂದನ್ನೂ ಅವರು ರಚಿಸಿದರು. ಅವರು ಬರೆದಿರುವ 'ವೇದ ಹೃದಯ','ಸಾಕ್ಷಾತ್ಕಾರ', 'ವೇದಾರ್ಥ ಕಲ್ಪಲತಾ' ಮತ್ತು 'ವಾಕ್ ಸುಧಾ' (ಕಡೆಯವೆರಡೂ ಮದನಗೋಪಾಲ ಪೋದ್ದಾರ ವಿಶ್ವಸ್ತಸಮಿತಿಯಿಂದ ಅಚ್ಚಾಗಿವೆ) ಇವುಗಳಲ್ಲಿಯೂ ವೇದವನ್ನು ಕುರಿತು ಹೊಸ ಚಿಂತನೆ ನಡೆಸಿದ್ದಾರೆ.

ದೈವರಾತರು ಎಂಬತ್ತು ವರ್ಷ ವಯಸ್ಸಿನವರೆಗೂ ಗಟ್ಟಿಮುಟ್ಟಾಗಿದ್ದರು. ಏನಾದರೂ ಸಣ್ಣ ಪುಟ್ಟ ಬೇನೆ ಬರುತ್ತಿದ್ದಿತಷ್ಟೆ. ಬಂದಾಗ ತಾವೇ ಮದ್ದು ಮಾಡಿಕೊಳ್ಳುತ್ತಿದ್ದರು. ಅವರಿಗೆ ಈಗಿನ ವೈದ್ಯದಲ್ಲಿ ನಂಬಿಕೆಯಿರಲಿಲ್ಲ. ಆಯುರ್ವೇದದ ಪರಿಚಯ ಅವರಿಗೆ ಚೆನ್ನಾಗಿಯೇ ಇದ್ದಿತು. ಅವರ ಗುರುಗಳಾದ ಗಣಪತಿ ಮುನಿಗಳೂ ಆಯುರ್ವೇದ ಬಲ್ಲವರಾಗಿದ್ದರಷ್ಟೆ; ಅವರಿಂದ ಇವರು ಎಷ್ಟೋ ಚಿಕಿತ್ಸಾ ವಿಧಾನಗಳನ್ನು ಅರಿತುಕೊಂಡಿದ್ದರು. ಮತ್ತೆ, ಟೇಂಬೆ ಮಹಾರಾಜರಿಂದ ಹಠಯೋಗದ ನೌಲಿ, ಧೌತಿ ಮೊದಲಾದ ಕ್ರಿಯೆಗಳನ್ನು ಕಲಿತಿದ್ದರು. ಗೋಕರ್ಣದ ಸುತ್ತಮುತ್ತಲಿನ ಕಾಡುಗಳಿಂದ,

‘ಅಪರವಾರಿಧಿ ಭಂಗ ಪೂಜ್ಯ ಮಹಾಲಿಂಗ ಗಣಪತಿಯ ಸತ್ಸಂತ, ರಮಣಮೌನೋತ್ಸಂಗ’

ನೇಪಾಳದ ಕಡೆಯಿಂದ ಗಿಡಮೂಲಿಕೆಗಳನ್ನು ಸಂಗ್ರಹಿಸಿ ತರುತ್ತಿದ್ದರು;ತಾವೇ ಔಷಧಗಳನ್ನು ತಯಾರಿಸುತ್ತಿದ್ದರು. ಕಡೆಯ ದಿನಗಳಲ್ಲಿ ಅವರನ್ನು ರಕ್ತದ ಒತ್ತಡದ ಕಾಯಿಲೆ ಕಾಡುತ್ತಿತ್ತು. ತಾವೇ ಚಿಕಿತ್ಸೆ ಮಾಡಿಕೊಂಡು ಸುಧಾರಿಸಿ ಕೊಳ್ಳುತ್ತಿದ್ದರು. ಆದರೆ ಬರುಬರುತ್ತ ಇದು ಉಲ್ಬಣವಾಯಿತು. ಎದ್ದು ಓಡಾಡುವುದು ಕೂಡ ದುಸ್ತರವೆನಿಸುತ್ತಿತ್ತು.

ಕಡೆಗೆ ಜ್ವರ ಕಾಯಲಾರಂಭಿಸಿ ದೇಹ ಸೊರಗಿತು. ತಾವೇ ಮದ್ದು ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅವರಿಗೆ ತುಂಬ ಬೇಕಾದವರಾಗಿದ್ದ ಡಾ. ಉಮೇಶ ಹೊಸಮನೆ ಅವರು ಬಂದು ಚಿಕಿತ್ಸೆ ಮಾಡಿದರು. ಜ್ವರ ನಿಂತಿತಾದರೂ ಮೊದಲಿನ ಶಕ್ತಿ ಮರಳಲಿಲ್ಲ. ಮತ್ತೆ ಅವರು ಏಳುವುದಾಗ ಲಿಲ್ಲ. ತಮ್ಮ ಎಂಬತ್ತನಾಲ್ಕನೆಯ ವರ್ಷ ವಯಸ್ಸಿನಲ್ಲಿ (1975ರಲ್ಲಿ) ರಾತ್ರಿ ಮಲಗಿದ್ದಂತೆ ತೀರಿಕೊಂಡರು. 'ಆಶ್ರಮದ ಗಣೇಶಭಟ್ಟರು' ಮಹರ್ಷಿ ದೈವರಾತರಾಗಿ, ಲೋಕವಿಶ್ರುತರಾಗಿ ಲೋಕಸಂಗ್ರಹವನ್ನೂ ನಡೆಸಿ ತಮ್ಮ ಆಶ್ರಮದಲ್ಲೇ ದೇಹವಿಟ್ಟರು.

ಹೀಗೆ ಇಂದಿನ ಕಾಲದಲ್ಲೂ ಮಂತ್ರದ್ರಷ್ಟಾರರಾದ ಋಷಿಗಳು ಇರಬಲ್ಲ ರೆಂಬುದನ್ನು ನಾಡಿಗೆ ಮನವರಿಕೆ ಮಾಡಿಕೊಟ್ಟು ಹಿಂದಿನ ಋಷಿಗಳ ಬಾಳುವೆಯ ಪರಿಚಯವನ್ನು ಜನಕ್ಕೆ ಒದಗಿಸಿಕೊಟ್ಟು ಮುಕ್ತರಾದ ಮಹರ್ಷಿ ದೈವರಾತರ ಸ್ಮರಣೆ ಬಹುಕಾಲ ಉಳಿಯುತ್ತದೆ. ನಮ್ಮ ವರಕವಿ ದ. ರಾ. ಬೇಂದ್ರೆಯವರು ಅಂದಂತೆ "ಆದರ್ಶ ಉತ್ತುಂಗ, ಹುಲ್ಲು ಕಚ್ಚಿರಲಿಲ್ಲ" ಅವರು. ಅವರು ತೀರಿಕೊಂಡ ಸಂದರ್ಭದಲ್ಲಿ ಬೇಂದ್ರೆಯವರು ಬರೆದ ಗೀತ ವೊಂದರಲ್ಲಿ ಹೀಗೆಂದಿದ್ದಾರೆ—

ಅಪರವಾರಿಧಿಭಂಗ, ಪೂಜ್ಯ ಮಹಾಬಲಲಿಂಗ
ಗಣಪತಿಯ ಸತ್ಸಂಗ, ರಮಣಮೌನೋತ್ಸಂಗ
ದತ್ತಭಕ್ತನ ಭಕ್ತನಾನಭುಕ್ತನೆ ? ಶಕ್ತ !
ತಮ್ಮಾಶೆಗಿದೆ ಕೊನೆಯೆ ? ಓ ಯೋಗಿ, ಓ ಮುಕ್ತ !
ವೇದವಲ್ಲವು ವಾದ, ಹೃದಯದಾ ಸಂವಾದ
ಭೂಮಿ ಸಾಟದೆ ತಮಗೆ ಬೆಳೆಸಿದಿರಿ ಶ್ರೀಪಾದ
ರಸರಸಿಕರಿದ್ದಲ್ಲಿ, ಸ್ವಚ್ಛಂದವಿದೆ ಭಾಗ್ಯ
ಅರ್ಣವದ ಘೋಷಕ್ಕೆ ಗೋಕರ್ಣವೇ ಯೋಗ್ಯ !

ಇದು ನಮ್ಮ ಭಾರತ

ಮಕ್ಕಳ ಶೈಕ್ಷಣಿಕ ಪುಸ್ತಕ ಸರಣಿ

ತರಗತಿಯ ಓದಿಗೆ ಪೂರಕವಾಗುವಂತಹ, ವಿಪುಲ ಚಿತ್ರಗಳನ್ನೊಳಗೊಂಡ ಪುಸ್ತಕಗಳ ನಿರಂತರ ಪ್ರಕಟಣೆ. ಭಾರತದ ಇತಿಹಾಸ, ಭೂವಿವರಣೆ ಮತ್ತು ವಿದ್ಯಾರ್ಥಿಗಳು ತಿಳಿದಿರಲೇಬೇಕಾದ ಇನ್ನೂ ಎಷ್ಟೋ ವಿಷಯಗಳ ಬಗೆಗೆ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಒದಗಿಸುತ್ತದೆ 'ಇದು ನಮ್ಮ ಭಾರತ'.

ಇದುವರೆಗೆ 9 ಸಂಚಿಕೆಗಳು ಪ್ರಕಟವಾಗಿವೆ.

ಪ್ರತಿಪುಸ್ತಕದ ಬೆಲೆ ರೂ. 5

ಪ್ರತಿಗಳಿಗೆ ಬರೆಯಿರಿ :

ಐಬಿಎಚ್ ಪ್ರಕಾಶನ

ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು 560 009

ವಿಜ್ಞಾನ: ನೋಡು ಕಲಿ

ಮಾಲೆಯ ಹೆಸರೇ ಸೂಚಿಸುವಂತೆ
ವರ್ಣರಂಜಿತ ಚಿತ್ರಗಳನ್ನು ನೋಡಿ
ಸರಳ ನಿರೂಪಣೆಯಿಂದ ಕಲಿಯುವುದು.

ಈ ಪುಸ್ತಕ ಮಾಲೆಯಲ್ಲಿ ಇದುವರೆಗೆ
5 ಸಂಚಿಕೆಗಳು ಪ್ರಕಟವಾಗಿವೆ:

1 ಆಕಾಶದ ಅದ್ಭುತಗಳು
2 ಮನುಷ್ಯನ ಕತೆ
3 ಹಕ್ಕಿಗಳು
4 ಶಿಲೆಗಳು ಖನಿಜಗಳು
5 ಕೀಟಗಳು

ಪ್ರತಿಪುಸ್ತಕದ ಬೆಲೆ ರೂ. 5

ಪ್ರತಿಗಳಿಗೆ ಬರೆಯಿರಿ:

ಐಬಿಎಚ್ ಪ್ರಕಾಶನ

ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು 560 009

ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ

ಐ ಬಿ ಎಚ್ ಪ್ರಕಾಶನ
ಬೆಂಗಳೂರು ೧

ಇಂಡಿಯ ಬುಕ್ ಹೌಸ

388